# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:220 • ನೋಂದಣಿ ನಂ.:KARKAN27911 • ವಿಜಯನಗರ • 26.01.2024 • ಶುಕ್ರವಾರ • ಪುಟ:04 • ಬೆಲೆ:2

Volume:01 • Issue:220 • Reg.No:KARKAN27911 • VIJAYANAGARA • 26.01.2024 • Friday • Page:04 • Rs:2







**ಮೈಕ್ರೋ ನ್ಯೂಸ್**

## ಜ.26 ರಂದು ಸಮಾನತೆಯ ಕಡೆಗೆ ಕನ್ನಡ ಚಲನಚಿತ್ರ ಪ್ರದರ್ಶನ

**ಹಂಪಿ ಟೈಮ್ಸ್ ಹೊಸಪೇಟೆ**

ಅಸ್ಪೃಶ್ಯತೆ ನಿವಾರಣೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಾಯೋಜನೆ ಮಾಡಿದ ಸಮಾನತೆಯ ಕಡೆಗೆ ಎಂಬ ಕನ್ನಡ ಚಲನಚಿತ್ರವು ಚಂದನವಾಹಿನಿಯಲ್ಲಿ ಜ.26 ರಂದು ಗಣರಾಜ್ಯೋತ್ಸವ ದಿನದಂದು ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆ ಅವಧಿಯಲ್ಲಿ ಪ್ರಸಾರವಾಗಲಿದೆ. ವಿಜಯನಗರ ಜಿಲ್ಲೆಯ ಸಾರ್ವಜನಿಕರು ಈ ಚಲನಚಿತ್ರವನ್ನು ವೀಕ್ಷಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ್.ಹೆಚ್.ವಿ. ತಿಳಿಸಿದ್ದಾರೆ.

## ಗಣರಾಜ್ಯೋತ್ಸವ ಕಾರ್ಯಕ್ರಮ ಇಂದು

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತದಿಂದ 75ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮವು ಜ.26ರಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಧ್ವಜಾರೋಹಣ ನೆರವೇರಿಸುವರು. ಶಾಸಕರಾದ ಹೆಚ್. ಆರ್. ಗವಿಯಪ್ಪ ಅವರು ಅಧ್ಯಕತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ವೈ. ದೇವೇಂದ್ರಪ್ಪ, ಶಾಸಕರಾದ ಕೆ.ನೇಮಿರಾಜ ನಾಯ್ಕ್, ಡಾ.ಎನ್.ಟಿ. ಶ್ರೀನಿವಾಸ್, ಎಲ್. ಕೃಷ್ಣನಾಯಕ, ಎಂ.ಪಿ.ಲತಾ ಮಲ್ಲಿಕಾರ್ಜುನ, ನಗರಸಭೆ ಅಧ್ಯಕ್ಷೆ ಕುಮಾರಿ ಎ. ಲತಾ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಸೇರಿದಂತೆ ಇತರರು ಉಪಸ್ಥಿತರಿರುವರು. ಪದ್ಮಶ್ರೀ ಪುರಸ್ಕೃತರಾದ ಮಾತಾ ಮಂಜಮ್ಮ ಜೋಗತಿ ವಿಶೇಷ ಆಹ್ವಾನಿತರಾಗಿದ್ದಾರೆ. ಈ ವೇಳೆ ಆಕರ್ಷಕ ಪಥ ಸಂಚಲನ ಮತ್ತು ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

**ಸಂವಿಧಾನ ಜಾಗೃತಿ ಜಾಥಾ:** ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ ಹಿನ್ನೆಲೆಯಲ್ಲಿ ಸ್ತಬ್ಧ ಚಿತ್ರ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವರು ಚಾಲನೆ ನೀಡುವರು.






# ನುಡಿದಂತೆ ನಡೆಯದ ಕೈ ಸರ್ಕಾರ

## ಕೊಟ್ಟ ಮಾತಿನಂತೆ ಕೃಷಿ ವಿರೋಧಿ ಕಾನೂನುಗಳನ್ನು ಹಿಂಪಡೆಯಬೇಕು ಸರ್ಕಾರಕ್ಕೆ ತಲಾ ಒಂದು ಸಾವಿರ ರೂ. ಕೊಡುತ್ತೇವೆಂದು ಪ್ರತಿಭಟಿಸಿದ ರೈತರು




**ಹಂಪಿ ಟೈಮ್ಸ್ ಹೊಸಪೇಟೆ**

ಗ್ಯಾರಂಟಿ ಘೋಷಣೆಗಳಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗದೆ ಗ್ಯಾರಂಟಿ ಜಾರಿಗೆ ಒತ್ತು ನೀಡುತ್ತಿದ್ದು, ರೈತರನ್ನು ಭಿಕ್ಷೆ ಬೇಡುವಂತೆ ಮಾಡಿದೆ. ಸರ್ಕಾರದ ಬೊಕ್ಕಸದಲ್ಲಿ ಹಣ ಇಲ್ಲವೆಂದರೆ ರೈತರು ಕೂಲಿ ಮಾಡಿ ತಲಾ ಒಂದು ಸಾವಿರ ರೂಪಾಯಿ ಕೊಡುತ್ತೇವೆ ಎಂದು ಕರ್ನಾಟಕ ರಾಜ್ಯ ರೈತರ ಸಂಘ ಹಾಗೂ ಹಸಿರು ಸೇನೆ ರಾಜ್ಯ ಕಾರ್ಯಾಧ್ಯಕ್ಷ ಜೆ.ಕಾರ್ತಿಕ ಸರ್ಕಾರ ವಿರುದ್ದ ಗುಡುಗಿದರು.

ಕರ್ನಾಟಕ ರಾಜ್ಯ ರೈತರ ಸಂಘ ಹಾಗೂ ಹಸಿರು ಸೇನೆಯು ರೈತರಿಗೆ ಬರ ಪರಿಹಾರ, ಬೆಳೆಹಾನಿ ಹಣ ರೈತರ ಖಾತೆ ಹಾಕದ ಸರ್ಕಾರದ ವಿರುದ್ಧ ಗುರುವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು. ರೈತರು ಸಾಲ ಮಾಡಿ ಬೆಳೆ ಬೆಳೆದಿರುತ್ತಾರೆ. ಬರದಿಂದಾಗಿ ಬೆಳೆ ಹಾನಿಗೀಡಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವಾರ್ಷಿಕ ಬೆಳೆ ಬೆಳೆದ ರೈತರು ಸೇರಿದಂತೆ ರೈತರಿಗೆ ಸರ್ಕಾರ ಘೋಷಿಸಿರುವ ಬೆಳೆಹಾನಿ ಪರಿಹಾರ ಮೊತ್ತ ಕೇವಲ ಎರಡು ಸಾವಿರ ರೂಪಾಯಿಯಾಗಿರುವುದು ಖಂಡಿಸುತ್ತೇವೆ. ರೈತರ ಮತದಿಂದಲೆ ಅಧಿಕಾರಕ್ಕೆ ಬಂದಿರುವ ಸರ್ಕಾರ ರೈತರನ್ನು ಕಡೆಗಣಿಸಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ. ಕೂಡಲೇ ರೈತರ ಖಾತೆಗೆ 10000 ರೂ ಹಾಕಬೇಕು. ಮಳೆಯಾಶ್ರಿತ ಬೆಳೆಗೆ ಹೆಕ್ಟೇರಿಗೆ 25 ಸಾವಿರ ರೂ. ನೀರಾವರಿಗೆ ಪ್ರತಿ ಹೆಕ್ಟೇರ್‌ಗೆ 40 ಸಾವಿರ ರೂ ಮತ್ತು ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ 50 ಸಾವಿರ ರೂ ನಿಗಧಿಪಡಿಸಬೇಕು. ಸರ್ಕಾರದ ಬೊಕ್ಕಸದಲ್ಲಿ ಹಣ ಇಲ್ಲ ಎಂದು ಹೇಳಿದರೆ, ರೈತರು ತಲಾ ಒಂದು ಸಾವಿರ ರೂಪಾಯಿ ಸರ್ಕಾರಕ್ಕೆ ನೀಡುತ್ತೇವೆ ಎಂದು ಮಾತಿನಲ್ಲೇ ಚಾಟಿ ಬೀಸಿದರು. ಪಾಪಿನಾಯಕನಹಳ್ಳಿ ಏತ ನೀರಾವರಿ ಕಾಮಗಾರಿಗೆ 243 ಕೋಟಿ ರೂ. ನಿಗಧಿಯಾಗಿದ್ದರೂ ಈಗಾಗಲೆ 180 ಕೋಟಿ ರೂಗಳನ್ನು ಗುತ್ತಿಗೆದಾರರು ಪಡೆದಿರುತ್ತಾರೆ. ಕಾಮಗಾರಿ ಕಳಪೆ ಖಂಡಿಸಿ ರೈತರು ನಡೆಸಿದ ಹೋರಾಟಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದೆ ಜಾಣಕುರುಡತನ ತೋರಿ ಗುತ್ತಿಗೆದಾರರಿಗೆ ಹಣ ಪಾವತಿಸಿದ್ದಾರೆ. ಕಬ್ಬು ಬೆಂಕಿಗಾಹುತಿಯಾದರೂ ಇನ್ನೂ ಪರಿಹಾರ ನೀಡಿಲ್ಲ. ಸಚಿವರು ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ನಿರ್ಲಕ್ಷ್ಯಿಸಿದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾಧ್ಯಕ್ಷ ಜೆ.ಎನ್.ಕಾಳಿದಾಸ ಮಾತನಾಡಿ, ಮಾಜಿ ಸಚಿವ ಆನಂದಸಿಂಗ್ ಮತ್ತು ಶಾಸಕ ಎಚ್.ಆರ್.ಗವಿಯಪ್ಪ ಸಕ್ಕರೆ ಕಾರ್ಖಾನೆ ಸ್ಥಾಪನೆಯ ಸ್ಥಳಗಳಲ್ಲೆ ತಿಕ್ಕಾಟ ನಡೆದಿದೆ. ರೈತರ ಹಿತಕಾಪಾಡುವ ಸರ್ಕಾರವಾಗಿದ್ದಲ್ಲಿ ಕೂಡಲೇ ಸಕ್ಕರೆ ಕಾರ್ಖಾನೆ >>3

### ಹಂಪಿ ಉತ್ಸವ: ಚಿಕಿತ್ಸಾ ಕೇಂದ್ರಗಳ ಮಾಹಿತಿಗಾಗಿ

# ಆರೋಗ್ಯ ಇಲಾಖೆಯಿಂದ ಕ್ಯೂ ಆರ್ ಕೋಡ್ ರಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದಲ್ಲಿ ತುರ್ತು ಆರೋಗ್ಯ ಸೇವೆಗೆ ಆರೋಗ್ಯ ಇಲಾಖೆಯ ಈ ಭಾರಿ ಹೊಸ ಪ್ರಯೋಗಕ್ಕೆ ಮುಂದಾಗಿದ್ದು, ಉತ್ಸವ ನೋಡಲು ಬಂದವರಿಗೆ ಚಿಕಿತ್ಸೆಯ ಅಗತ್ಯಬಿದ್ದರೆ ಎಲ್ಲೆಲ್ಲೆ ಸೌಲಭ್ಯ ಪಡೆಯಬಹುದು ಎಂಬುದನ್ನು ತಿಳಿಯಲು ಮತ್ತು ಅಂಬ್ಯುಲೆನ್ಸ್ ಸೇವೆ ಪಡೆಯಲು ಕ್ಯೂ ಆರ್ ಕೋಡ್ ರಚಿಸಿದೆ. ಇಂದು ಎಲ್ಲಾ ಡಿಜಿಟಲ್‌ಮಯವಾಗಿರುವುದರಿಂದ ಬಹುತೇಕರಲ್ಲಿ ಸ್ಮಾರ್ಟ್ ಮೊಬೈಲ್‌ಗಳಿವೆ. ಮತ್ತೊಬ್ಬರನ್ನು ಕೇಳಿ ತಿಳಿಯಲು ಮುಜುಗರಕ್ಕೊಳಗಾಗುವರು ಕ್ಯೂ ಆರ್ ಕೋಡ್ ಸ್ಕ್ಯಾನ್ ಬಳಸಿ ಚಿಕಿತ್ಸಾ ಕೇಂದ್ರಗಳ ಮಾಹಿತಿ ಪಡೆಯಬಹುದಾಗಿದೆ. ಹಂಪಿ ಉತ್ಸವದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಬಾರಿ 9 ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಅಂಬ್ಯುಲೆನ್ಸ್ ಸಮೇತ ಸೇವೆ ನೀಡಲು ಮುಂದಾಗಿರುವುದಕ್ಕೆ ಜನ ಮೆಚ್ಚುಗೆಗೆ ವ್ಯಕ್ತಪಡಿಸಿದ್ದಾರೆ.

**ಎಲ್ಲೆಲ್ಲೆ ತಾತ್ಕಾಲಿಕ ಕ್ಲಿನಿಕ್:** 1 ಶ್ರೀ ವಿರೂಪಾಕ್ಷೇಶ್ವರ ದೇವಾಲಯ ಕ್ಲಿನಿಕ್, 2. ಹಂಪಿ ಸರ್ಕಾರಿ ಶಾಲೆ ಕ್ಲಿನಿಕ್, 3. ಎದುರು ಬಸವಣ್ಣ ವೇದಿಕೆ ಕ್ಲಿನಿಕ್, 4. ಕಡಲೆಕಾಳು ಗಣಪ ಕ್ಲಿನಿಕ್, 5. ಗಾಯತ್ರಿ ಪೀಠ ಕ್ಲಿನಿಕ್, 6.ಕಡ್ಡಿರಾಂಪುರ ಪಾರ್ಕಿಂಗ್ ಕ್ಲಿನಿಕ್, 7. ಕಮಲಾಪುರ ಕೆರೆ ದಂಡೆ ಮೇಲೆ ವಾಟರ್ ಸ್ಪೋರ್ಟ್ಸ್ ಕ್ಲಿನಿಕ್, 8. ಧ್ವನಿ ಮತ್ತು ಬೆಳಕು ಗಜಾಲಯದ ಬಳಿ ಕ್ಲಿನಿಕ್, 9. ಕಮಲಾಪುರ ಮಯೂರ ಹೋಟೆಲ್ ಆವರಣ ಹಂಪಿ ಬೈಸ್ಕೈ ಬಳಿ ಕ್ಲಿನಿಕ್ ಎಂಬ ಮಾಹಿತಿಯನ್ನು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಗೂಗಲ್ ಮ್ಯಾಪ್‌ನಲ್ಲಿ ತಿಳಿಯಬಹುದಾಗಿದೆ ಎಂದು ಡಿಎಚ್‌ಒ ಶಂಕರನಾಯ್ಕ ತಿಳಿಸಿದ್ದಾರೆ

# ಬನಶಂಕರಿ ದೇವಿ ರಥೋತ್ಸವ



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಕೌಲ್ ಪೇಟೆಯ ಶಕ್ತಿದೇವತೆ ಬನಶಂಕರಿ ದೇವಿ ಮೂರ್ತಿಯ ರಥೋತ್ಸವ ಸಾವಿರಾರು ಭಕ್ತಸ್ತೋಮದಲ್ಲಿ ಸಂಭ್ರಗಳೊಂದಿಗೆ ಗುರುವಾರ ಸಂಜೆ 5.10ಕ್ಕೆ ಜರುಗಿತು.

ರಥೋತ್ಸವಕ್ಕೂ ಮೊದಲು ಬನಶಂಕರಿ ದೇವಿ ಮೂರ್ತಿಗೆ ಬೆಳಗಿನಿಂದ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಮದ್ಯಾಹ್ನ 4.50 ರವೇಳೆಗೆ ಶ್ರೀ ದೇವಿಯ ಉತ್ಸವಮೂರ್ತಿಯನ್ನು ಸಕಲ ಬಿರುದಾವಳಿಗಳೊಂದಿಗೆ ರಥದ ಬಳಿ ತಂದು ರಥದ ಸುತ್ತಲು ಪ್ರದಕ್ಷಣೆ ಹಾಕಿದ ನಂತರ ದೇವಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿದರು.

ರಥದ ಪಟಾಕ್ಷಿ ಹರಾಜು ಪ್ರಕ್ರಿಯೆ ನಡೆಯಿತು 51000 ಸಾವಿರ ರೂಪಾಯಿಗಳಿಗೆ

ಭಕ್ತ ಭಂಟನಹಳ್ಳಿ ಗುರುಬಸಪ್ಪ ಪಡೆದರು. ಈ ಪ್ರಕ್ರಿಯೇ ಮುಗಿಯುತ್ತಿದ್ದಂತೆ ರಥೋತ್ಸವಕ್ಕೆ ಚಾಲನೆ ದೊರಕಿತು. ರಥದಲ್ಲಿ ಆರ್. ಎಂ.ಕೊಟ್ರೇಶ್ ಶಾಸ್ತ್ರಿ ಮತ್ತಿತರರು ಇದ್ದರು.

ಸಮಾಳದ ಲಯಬದ್ದ ಮಂಗಳವಾದ್ಯಕ್ಕೆ ಭಕ್ತರು ನಂದಿಕೋಲು ಕುಣಿತ ಮತ್ತಿತರುಗಳ ಸಂಭ್ರಮದೊಂದಿಗೆ ರಥೋತ್ಸವ ಸಾಗಿತು. ರಥವನ್ನು ಎಳೆಯಲು ಭಕ್ತರು ಮುಗಿಬಿದ್ದು ಭಕ್ತಿ ಸಮರ್ಪಿಸಿದರು.


ರಥೋತ್ಸವ ದೇವಸ್ಥಾನದ ಪ್ರಾಂಗಣದಿಂದ ಜವಳಿ ವೃತ್ತ , ಉಜ್ಜಿನಿ ರಸ್ತೆ ಗುಂಟ ಸಾಗಿ ರೇಣುಕಾಚಾರ್ಯ ದೇವಸ್ಥಾನದ ವರೆಗೂ ಸಾಗಿ ಪುನಃ ದೇವಸ್ಥಾನದ ಬಳಿಗೆ ಹಿಂತಿರುಗಿತು.

ಶ್ರೀ ಬನಶಂಕರಿ ದೇವಸ್ಥಾನ ಸೇವಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೊಳ್ಳಿ ವೀರಭದ್ರಪ್ಪ, ಕಾರ್ಯದರ್ಶಿ ಎಂ.ಶಿವಣ್ಣ,ಜಿ. ಕೊಟ್ರೇಶಪ್ಪ,ಎ.ಲಿಂಗಪ್ಪ, ಹೆಚ್.ಗುರುಬಸವ ರಾಜಪ್ಪ, ತಳಸ್ಥ ರಾಜಣ್ಣ, ಮೈದೂರು ಕೊಟ್ರೆಶಪ್ಪ, ಮೈದೂರು ವಿಶ್ವನಾಥ್ ಟಿ.ಮಂಜುನಾಥ, ಮತ್ತಿತರರು ದೈವದವರು ಅಸಂಖ್ಯಾತ ಭಕ್ತರು ಪಾಲ್ಗೊಂಡಿದ್ದರು.

# ಹಂಪಿ ಉತ್ಸವ ಸಿದ್ಧತೆ ಪರಿಶೀಲನೆ



ಹಂಪಿ ಉತ್ಸವ ಫೆ.2, 3 ಮತ್ತು 4ರಂದು ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಸಂಸದ ವೈ.ದೇವೇಂದ್ರಪ್ಪ, ಶಾಸಕರಾದ ಹೆಚ್.ಆರ್.ಗವಿಯಪ್ಪ, ನೇಮಿರಾಜ ನಾಯ್ಕ, ಎಂ.ಪಿ.ಲತಾ, ಡಾ.ಶ್ರೀನಿವಾಸ, ಡಿಸಿ ಎಂ.ಎಸ್. ದಿವಾಕರ, ಜಿಪಂ ಸಿಇಒ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಸಿದ್ಧತೆ ಪರಿಶೀಲಿಸಿದರು.






## ವಚನ ಅರಿವು

### ತ್ರಿವಿಧ ಒಂದಾಗಬೇಕು

**ತನ್ನ ತಾನರಿದರೆ ತನ್ನರಿವೆ ಗುರು,**
**ತಾನೆ ಲಿಂಗ, ತನ್ನ ನಿಷ್ಪತ್ತಿಯೆ ಜಂಗಮ,**
**ಇಂತೀ, ತ್ರಿವಿಧವು ಒಂದಾದಡೆ**
**ಕಲ್ಲೇಶ್ವರಲಿಂಗವು ತಾನೆ.**

**– ಹಾವಿನಾಳ ಕಲ್ಲಯ್ಯ**

ಶರಣ ಧರ್ಮದಲ್ಲಿ ಗುರು, ಲಿಂಗ, ಜಂಗಮವೆಂದರೆ ವ್ಯಕ್ತಿಗಳಲ್ಲ, ತತ್ವಗಳು. ಪರಿಕಲ್ಪನೆಗಳು. ವ್ಯಕ್ತಿ ಗುರು, ಲಿಂಗ, ಜಂಗಮವನ್ನು ಹೊರಗಿನಿಂದಲೇ ಕಾಣಲು ಬಯಸುತ್ತಾನೆ. ತನ್ನನ್ನು ಹೊರತುಪಡಿಸಿ ಈ ತತ್ವ, ಪರಿಕಲ್ಪನೆಗಳು ಇಲ್ಲ ಎಂಬುದನ್ನು ಅರಿತು ನಡೆಯಲಾರ. ಮನುಷ್ಯ ತನ್ನನ್ನು ತಾನು ಅರಿತುಕೊಂಡು ಜ್ಞಾನದ ಮಾರ್ಗದಲ್ಲಿ ಬದುಕಿದರೆ ಅವನೇ ಗುರುವಾಗುತ್ತಾನೆ. ಅರಿವನ್ನು ಪಡೆದು ಆನುಭಾವಿಯಾಗಿ ಸಾಧನೆಯಲ್ಲಿ ತೊಡಗಿದರೆ ತಾನೆ ಲಿಂಗವಾಗುತ್ತಾನೆ. ತಿಳುವಳಿಕೆ ಪಡೆದು ಅದರಂತೆ ನಡೆದು, ನುಡಿದು ಪಕ್ವವಾದರೆ ತಾನೆ ಜಂಗಮವಾಗುತ್ತಾನೆ. ಈ ಮೂರು ವಿಧ ಒಂದು ಮಾಡಿಕೊಂಡು ಸಾಧನೆ ಮಾಡಿದರೆ ಕಲ್ಲೇಶ್ವರಲಿಂಗವು ತಾನೆ ಆಗುತ್ತಾನೆ ಎನ್ನುತ್ತಾನೆ ಶರಣ ಕಲ್ಲಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಸರ್ಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮತದಾನ ಜಾಗೃತಿ




**ಹಂಪಿ ಟೈಮ್ಸ್ ಕೊಟ್ಟೂರು**
ಮತದಾನ ನಮ್ಮೆಲ್ಲರ ಹಕ್ಕು, ಮತವನ್ನು ಮಾರಿಕೊಳ್ಳದೆ ನಿಷ್ಪಕ್ಷಪಾತವಾಗಿ ಉತ್ತಮ ವ್ಯಕ್ತಿಗಳನ್ನ ಆಯ್ಕೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಕಾಲೇಜಿನ ಪ್ರಾಚಾರ್ಯರು ಜಿ. ಸೋಮಶೇಖರಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಭಾರತೀಯ ಚುನಾವಣೆ ಆಯೋಗದ ಮಾರ್ಗದರ್ಶನದಲ್ಲಿ 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆ ಕಾಲೇಜ್ ವಿದ್ಯಾರ್ಥಿಗಳಿಗೆ ವಿದ್ಯುನ್ಮಾನ ಮತ ಯಂತ್ರದಲ್ಲಿ ಇವಿಎಂ ನಲ್ಲಿ ಮಾದರಿ ಮತದಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಮತದಾನದ ಬಗ್ಗೆ ಹಿರಿಯ ಉಪನ್ಯಾಸಕರಾದ ಶ್ರೀ ಸಿದ್ದೇಶ್ ಕೆ ಉಪನ್ಯಾಸ ನೀಡಿದರು,ಚಾಂದ್ ಪೀರ್ ಆಂಗ್ಲಭಾಷ್ ಉಪನ್ಯಾಸಕರು ಮತದಾನದ ನಿಯಮಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಡಾಕ್ಟರ್ ಜಗದೀಶ್ ಚಂದ್ರ ಬೋಸ್, ಶಿವಕುಮಾರ್ ಉಪನ್ಯಾಸಕರು ಹಾಗೂ ಚುನಾವಣೆ ಜಾಗೃತ ಅಧಿಕಾರಿಗಳು ಹಾಜರಿದ್ದರು. ಎನ್ ಎಸ್ ಎಸ್ ಅಧಿಕಾರಿ ಅಂಜಿನಪ್ಪ ಡಿ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕರಾದ ವಿರೂಪಾಕ್ಷಯ್ಯ ವಂದಿಸಿದರು

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ನೆನಪುಗಳ ಹೂರಣ ಹಂಪಿ ಉತ್ಸವ



ರಾಜ್ಯದಲ್ಲಿ ನಡೆಯುವ ಹಲವು ಉತ್ಸವಗಳಲ್ಲಿ ಹಂಪಿ ಉತ್ಸವಕ್ಕೆ ತನ್ನದೆ ಆದ ವಿಶೇಷತೆಯಿದೆ.ಐತಿಹಾಸಿಕ ಸ್ಥಳ ವಿಜಯನಗರ ಅರಸರ ರಾಜ್ಯಧಾನಿಯಲ್ಲಿ ನಡೆಯುವ ಹಂಪಿ ಉತ್ಸವ ಪ್ರವಾಸಿಗರೊಂದಿಗೆ, ಸ್ಥಳೀಯರು ಪಾಲ್ಗೊಂಡು ಮೂರು ದಿನಗಳ ಕಾಲ ಜಿಲ್ಲಾಡಳಿತವು ಅದ್ದೂರಿಯಾಗಿ ಆಚರಿಸುವ ಸಂಭ್ರಮದ ಕಾರ್ಯಕ್ರಮ

ನಾನು ಪ್ರೌಢಶಾಲೆ ಮುಗಿಸಿ ಕಾಲೇಜ್ಗೆ ಬಂದ ಮೇಲೆ ಉಹಂಪೆಇವನ್ನು ಇಲ್ಲಿಯವರೆಗೂ ತಪ್ಪಿಸಿಕೊಂಡಿಲ್ಲ ಅಷ್ಟೊಂದು ಹಂಪಿ ಉತ್ಸವದ ಜೊತೆ ನಂಟು ,ನನ್ನಂತೆ ಬಳ್ಳಾರಿ–ವಿಜಯನಗರ–ಕೊಪ್ಪಳ ಜಿಲ್ಲೆಯ ಸ್ಥಳೀಯರಿಗೆ ಹಂಪಿ ಉತ್ಸವ ಎಂಬುದು ಸಿಹಿ ನೆನಪುಗಳ ಹೂರಣ.

ಹಂಪೆ ಉತ್ಸವಕ್ಕೆ ನಮ್ಮ ಊರಿನ ಗೆಳೆಯರೊಂದಿಗೆ ಹೋಗಲು ಅದೆಂತ ತಯಾರಿ ನಮ್ದು.ಅಪ್ಪನೊಂದಿಗೆ ಚೌಕಾಸಿ ಮಾಡಿ ಜೇಬಿಗೆ 300 ರೂಪಾಯಿ ತೆಗೆದುಕೊಂಡು ಬಿಟ್ಟರೆ ಮೂರು ದಿನದ ಹಂಪಿ ಉತ್ಸವ ಅದ್ಭುತ ನನ್ನ ಪಾಲಿಗೆ .

ಹಂಪಿ ಉತ್ಸವ ಸಮಯದಲ್ಲಿ ತಾಲೂಕ ಕೇಂದ್ರವಾದ ಹೊಸಪೇಟೆಯ ಮುಖ್ಯರಸ್ತೆಗಳಲ್ಲಿ ಸ್ವಾಗತ ಕಮಾನುಗಳನ್ನು ನೋಡುತ್ತಿದ್ದೇವು.,ಆಗೆಲ್ಲ ಪ್ಲೆಕ್ಸ್ ಹಾವಳಿ ಈಗಿನಷ್ಟು ಇರಲಿಲ್ಲ.ಬೆಂಡಿನಿಂದ ಮಾಡಿದ ದ್ವಾರಫಲಕಗಳು ನೋಡುಗರ ಮನಸೂರೆಗೊಳ್ಳುತ್ತಿದ್ದೇವು.ವಿಜಯನಗರ ಸಾಮ್ರಾಜ್ಯದ ಲಾಂಚನವಾದ ವರಾಹವು .ಸೂರ್ಯ ಚಂದ್ರ ಕತ್ತಿಯನ್ನು ನೋಡುತ್ತಿದ್ದ ಚಿತ್ರಗಳು ಹಾಗೂ ಹಂಪಿ ಉತ್ಸವಕ್ಕೆ ಸ್ವಾಗತ ಎನ್ನುವ ವಾಕ್ಯ ಮಾತ್ರ ಅದರಲ್ಲಿ ಇರುತ್ತಿತ್ತು. ಈಗಿನಂತೆ ಸ್ವಾಗತ ಮಾಡುವ ಪ್ಲೆಕ್ಸಗಳಲ್ಲಿ ಮಾಹಿತಿಗಿಂತ ವ್ಯಕ್ತಿಚಿತ್ರಗಳು ದೊಡ್ಡದು ಆಗಿರಲಿಲ್ಲ. ಇತಿಹಾಸದ ಕುರಿತು ಕುತೂಹಲಿಯಾದ ನನಗೆ ಹೊಸಪೇಟೆಯಲ್ಲಿ ಹಂಪಿ ಉತ್ಸವ ಸಮಯದಲ್ಲಿ ಹಾಕುತ್ತಿದ್ದ ಸ್ವಾಗತ ಕಮಾನಿನ ಆ ಚಿತ್ರಗಳು ವಿಜಯನಗರದ ಇತಿಹಾಸವನ್ನ ಇನಷ್ಟು ತಿಳಿದುಕೊಳ್ಳಲು ಪ್ರೇರೆಪಿಸಿದವು ಅಂದರೆ ತಪ್ಪಗಲಾರದು.

ಹಂಪಿ ಉತ್ಸವ ಸಮಯದಲ್ಲಿ ಹೊಸಪೇಟೆಯಿಂದ ಹಂಪೆಗೆ ಉಚಿತ ಬಸ್ ಪ್ರಯಾಣ ಸೌಕರ್ಯ ಇರುತ್ತಿತ್ತು.ಇದೊಂದು ಸಾರ್ವಜನಿಕರಿಗೆ ವರದಾನವಾಗಿತ್ತು. ನಾನು ಒಂದು ಬ್ಯಾಗ ಒಂದೆರಡು ದಿರಿಸು ಅದರಿಲಿಟ್ಟುಕೊಂಡು ಮೂರು ದಿನದ ಉತ್ಸವ ನೋಡಲು ಹಂಪೆಗೆ ನಮ್ಮ ಗೆಳೆಯರ ಗ್ಯಾಂಗ್ ಇಳಿದರೆ ಸಾಕು ವಿಜಯನಗರ ಸಾಮ್ರಾಜ್ಯದ ತುಂಬಾ ಮೂರುದಿನಗಳ ಕಾಲ ನಮ್ಮ ಸಂಚಾರ ಸಂಭ್ರಮ ಹೇಳತೀರದು. ಮೊದಲೆ ಮೂರುದಿನಗಳ ಸಂಜೆ ಶುರುವಾಗುವ ಸಾಂಸ್ಕೃತಿಕ ಕಾರ್ಯಕ್ರಮದ ವೇಳಾಪಟ್ಟಿ ಹಿಡಿದುಕೊಂಡು ಇಂತದ್ದೆ ಕಾರ್ಯಕ್ರಮ ಇಂತಹ ಸಮಯಕ್ಕೆ ಮಿಸ್ ಮಾಡದೆ ನೋಡಬೇಕೆಂದು ನಿರ್ದರಿಸಿಬಿಡುತ್ತಿದ್ದೆವು.ಆಗೆಲ್ಲ ಗುರುಕಿರಣ.ಹಂಸಲೇಖ ಕಾರ್ಯಕ್ರಮಗಳ ನಮ್ಮ ಪ್ರಿಯವಾದವು.ಇತ್ತಿಚಿಗೆ ಹಂಪಿ ಉತ್ಸವದಲ್ಲಿ ಕನ್ನಡಿಗರಿಗಿಂತ ಪರಬಾಷೆಯ ಗಾಯಕರಿಗೆ ಮಣಿ ಹಾಕಲಾಗುವುದು ಮತ್ತು ಯುವಜನತೆ ಅದನ್ನು ಬಯಸುತ್ತಾರೆ ಕೂಡ .ಎಲ್ಲ ಕಾಲದ ಮಹಿಮೆ.ಬರಿ ಸಿನಿ ಮಂದಿಯ ಕಾರ್ಯಕ್ರಮಗಳಷ್ಟೆ ಅಲ್ಲ ಹಂಪಿ ಉತ್ಸವದಲ್ಲಿ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳನ್ನು ನಾವು ನೋಡಿದ್ದೇವು. ನಮ್ಮೂರಿನ ಪಕ್ಕದ ಹಂಪಾಪಟ್ಟದ ಕಲಾವಿದರ ಕಾರ್ಯಕ್ರಮಗಳನ್ನು ನೋಡಿದ್ದು ಕೂಡ ನೆನಪಿದೆ. ಗೆಳೆಯರೆಲ್ಲರ ಕಣ್ಣು ತಪ್ಪಿಸಿ ಕವಿಗೋಷ್ಠಿಯ ಕಾರ್ಯಕ್ರಮಕ್ಕೆ ಹೋಗಿ ಕವಿತೆಗಳನ್ನು ಕೇಳಿಸಿಕೊಂಡ ನೆನಪು ಕೂಡ ಇದೆ. ಹೀಗೆ ಹಂಪಿ ಉತ್ಸವದಿಂದ ಹಲವಾರು ಪ್ರಸಿದ್ಧರ ತಂಡಗಳ ಗಾಯನ.ನಾಟಕ.ಸಂಗೀತ ಜುಗಲ್ ನೋಡುವ ಭಾಗ್ಯ ನಮಗೆ ದಕ್ಕಿತ್ತು. ತದನಂತರ ಎಲ್ಲ ಕಾರ್ಯಕ್ರಮಗಳ ಮುಗಿದ ಮೇಲೆ ರಾತ್ರಿ ಅಲ್ಲಿ ಕಾದ ಬಂಡೆಗಳನ್ನು ಹಾಸಿಗೆ ಮಾಡಿಕೊಂಡು ಗೆಳೆಯರೆಲ್ಲ ಕೂಡಿ ತರಾವರಿ ಮಾತುಗಳೊಂದಿಗೆ ಒಂದೆ ಬೆಡಶೀಟ್ ಹೊದ್ದುಕೊಂಡು ಮಲಗುತ್ತಿದ್ದೇವು. ಚಳಿಗಾಲದಲ್ಲಿ ಇರುತ್ತಿದ್ದ ಹಂಪಿ ಉತ್ಸವದ ಕುರಿತು ಕವಿತೆ ಬರೆದದ್ದು ಇದೆ.



**ಕೊಟ್ರೇಶ ಅಕ್ಕಿ**
**ಉಪನಾಯಕನಹಳ್ಳಿ**

ಹಗಲು ಹಂಪೆಯ ಕಲ್ಲುಬಂಡೆಗಳ,ಬೆಟ್ಟಗುಡ್ಡಗಳ ಸುತ್ತಿ ,ಕಲ್ಲಿನ ರಥ,ವಿರುಪಾಕ್ಷ ದೇವಸ್ಥಾನ,ಬಡವಿ ಲಿಂಗ,ಉಗ್ರ ನರಸಿಂಹ,ಮಹಾನವಮಿ ದಿಬ್ಬ,ಕಮಲ್ ಮಹಲ್ ಹೀಗೆ ಇಡಿ ಹಂಪಿಯನ್ನ ಕಾಲುದಾರಿಯಲ್ಲಿ ಸವೆಸಿ ಗೆಳೆಯರೊಂದಿಗೆ ನೋಡುತ್ತಿದ್ದ ಪರಿ ಮಜವಾಗಿತ್ತು.ನಮಗೆ ಪ್ರವಾಸಿ ಮಾಗದರ್ಶಿಗಳ ಅವಶ್ಯಕತೆ ಇರಲಿಲ್ಲ ಕಾರಣ ಅಷ್ಟೊಂದು ಹಣಕಾಸಿನ ವ್ಯವಸ್ಥೆ ನಮ್ಮಲ್ಲಿ ಇರಲಿಲ್ಲ ಆ ಕಾರಣಕ್ಕೆ ಸಮಯಕ್ಕೆ ತಕ್ಕಂತೆ ನಮ್ಮಲ್ಲಿ ಒಬ್ಬ ಗೈಡ್ ಆಗುತ್ತಿದ್ದ. ಅದರ ಕುರಿತು ರೋಚಕ ಕತೆ ಹೇಳುತ್ತಿದ್ದ. ತಾಳಿಕೋಟಿ ಕದನ ಆದ ನಂತರ ಆಕ್ರಮಣಕಾರರು ಹಂಪಿಯನ್ನು ಆರು ತಿಂಗಳ ಕಾಲ ದಾಳಿ ಮಾಡಿ ಸ್ಮಾರಕಗಳನ್ನು ನಾಶ ಮಾಡಿದ್ದರು ಎಂಬುದು ಅಚ್ಚಳಿಯದ ನೆನಪು. ಆಗೆಲ್ಲ ಹಂಪೆಯ ಕುರಿತು ಜನಸಾಮಾನ್ಯರ ಬಾಯಲ್ಲಿ ಒಂದು ಮಾತು ಚಾಲ್ತಿ ಇತ್ತು.ಹಂಪೆಯಲ್ಲಿ ಒಂದಡಿ ಮಣ್ಣ ಬಗೆದರು ಸಾಕು ಮುತ್ತು ರತ್ನ ಸಿಗತಾವು ,ಆ ಕಾರಣಕ್ಕೆ ಇಲ್ಲಿ ಯಾವ ಕಟ್ಟಡ ಕಟ್ಟೊಕೆ ಬೇಗ ಹಸ್ತು ಅನ್ನೊಲ್ಲ ಅಂತಾ. ಹೀಗೆ ಹಂಪೆ ಉತ್ಸವ ನೆಪದಲ್ಲಿ ಐತಿಹಾಸಿಕ ನಗರವನ್ನು ಸುತ್ತು ಹಾಕುತ್ತಿದ್ದೆವು. ಈಗಲೂ ಹಂಪೆಯನ್ನು ನಾವು ಕಣ್ಣತುಂಬಿ ಕೊಂಡಿದ್ದರ ಕುರಿತು ಸಾಕ್ಷಿಗೆ ಒಂದು ಚಿತ್ರವಿಲ್ಲ.ಆಗಿನ್ನು ಆ?ಯಂಡ್ರೈಡ್ ಮೊಬೈಲ್ ಪೋನ ಇರಲಿಲ್ಲ. ಕ್ಯಾಮೆರಾ ತೆಗೆದುಕೊಂಡು ಬಂದ ಪ್ರವಾಸಿಗರು ಮಾತ್ರ ಬೆರಳಣಿಕೆಯಷ್ಟು ಪೋಟಾಗಳನ್ನು ತೆಗೆದುಕೊಳ್ಳುತ್ತಿದ್ದರು. ಈಗಲೂ ಹಂಪೆಯನ್ನು ಕಾಲುನಡಿಗೆಯಲ್ಲಿ ಎಲ್ಲ ಕಡೆ ನಾನು ಸುತ್ತು ಹಾಕುವೆ.ಅದು ಅಂದಿನ ದಿನಗಳಿಂದ ನಾವು ಕಲಿತದ್ದು.

ಮೊನ್ನೆ ಅತಿಥಿಯೊಬ್ಬರಿಗೆ ಹಂಪೆ ತೋರಿಸುವ ಸಲುವಾಗಿ ತುಂಬ ದಿನಗಳ ನಂತರ ಗೈಡ್ ಸಮೇತ ಬೇಟಿ ನೀಡಿದ್ದೆ. ಬಂದ ಪ್ರವಾಸಿಗರಲ್ಲಿ ಅಲ್ಲಿನ ಇತಿಹಾಸಕ್ಕಿಂತ ತಮ್ಮ ಪೋಟೋಗಳು ಕುರಿತೆ ಮೋಹ.ಪೋಟೋ ತೆಗೆದ ಮರುಕ್ಷಣ ವ್ಯಾಟ್ಸಪ್ ಸ್ಟೇಟ್ಸ್ ಇಟ್ಟು ನಾನು ಐತಿಹಾಸಿಕನಗರಿಯಲ್ಲಿ ಎಂಬ ಟ್ಯಾಗಲೈನ್ ಹಾಕಿಕೊಳ್ಳುವ ಕಾತುರ...ಗೈಡ್ ಇಲ್ಲದೆ ಬರುವ ಕೆಲ ಪ್ರವಾಸಿಗರು .ಪ್ರತಿ ದೇವಾಲಯ ಅಥಾವ ಸ್ಮಾರಕದ ಕುರಿತು ಅಲ್ಲಿ ಚಿಕ್ಕದಾದ ಮಾಹಿತಿ ಫಲಕ ಇದ್ದರು,ಓದುವ ವ್ಯವಧಾನ ಇರುವುದಿಲ್ಲ. ಸಾಸಿವೆ ಕಾಳು ಗಣಪತಿ ನೋಡುತ್ತಿದ್ದೇವು. ಅಲ್ಲಿಗೆ ಬಂದ ಮಧ್ಯವಯಸ್ಕ ಗಂಡಸರ ಗುಂಪಲ್ಲಿ ಒಬ್ಬ ಹೇಳಿದ ಇದೆಲ್ಲ ಸಾಸಿವೆ ಕಾಳಿಂದ ಮಾಡಿದರಂತೆ. ಮತ್ತೊಬ್ಬ ಕೇಳಿದ ಸಾಸಿವೆ ಇಲ್ಲವಲ್ಲ ಇಲ್ಲಿ ಅಂದ? ಹಂಪೆಮೇಲೆ ದಾಳಿ ಆದಾಗ ಎಲ್ಲ ಹಾಳಾಗಿದೆ ಬಾ ಅಂತ ಹಾರಿಕೆ ಉತ್ತರ ಮತ್ತೊಬ್ಬನಿಂದ. ಸಾಸಿವೆ ವ್ಯವಹಾರ ಮಾಡುತ್ತಿದ್ದ ವ್ಯಾಪಾರಿಯೊಬ್ಬನಿಂದ ನಿರ್ಮಿತವಾಗಿದ್ದಕ್ಕೆ ಆ ಗಣೇಶನಿಗೆ ಸಾಸಿವೆಕಾಳು ಗಣಪತಿ ಎನ್ನುವ ಹೆಸರು ಬಂತೆಂದು ನಮ್ಮ ಪ್ರವಾಸಿ ಮಾರ್ಗದರ್ಶಿ ಮಲ್ಲೇಶಣ್ಣ ಹೇಳಿದರು ಹಾಗೂ ಫಲಕದಲ್ಲಿ ಕೂಡ ಈ ಮಾಹಿತಿ ಹೇಳಲಾಗಿತ್ತು.ವಿಜಯನಗರ ಅರಸರ ಕಾಲದಲ್ಲಿ ಅದನ್ನು ಗೌರಿಗಣಪತಿ ಎಂದು ಕರೆಯಲಾಗುತ್ತಿತ್ತು.ಹಿಂದೆ ಗೌರಿಯ ಹಿಂಬಂದಿ ಚಿತ್ರವಿದ್ದು ಮುಂದುಗಡೆ ಗಣೇಶ ಕಾಣುವನು ...

ಹಂಪಿಯ ಉತ್ಸವದಲ್ಲಿ ಕೊನೆಯ ದಿನದ ಮೆರವಣಿಗೆ ನಮ್ಮೆಲ್ಲರಿಗೂ ಪ್ರಿಯವಾದದು.ಆ ಮೆರವಣಿಗೆಯಲ್ಲಿ ಸಾಗುತ್ತಿದ್ದ ಸ್ಥಭ್ಧಚಿತ್ರಗಳು.ರಾಜ್ಯದ ಅನೇಕ ಕಲಾ ತಂಡಗಳ ನೃತ್ಯಗಳು ನಾವು ಕಣ್ಣತುಂಬಿಕೊಂಡಿದ್ದು .ಸಾಗರ ಮಹಿಳಾ ತಂಡದ ಡೊಳ್ಳು ಕುಣಿತ ಕಂಡಾಗ ಡೊಳ್ಳನ್ನು ಗಂಡಿನಂತೆ ,ಹೆಣ್ಣು ಎಷ್ಟು ಚೆಂದ ಬಾರಿಸುತ್ತಾಳೆ ಎಂಬುದು. ಹೀಗೆ ಮೂರುದಿನದ ಉತ್ಸವ ದಿನಗಳು ನಾವುಗಳು ಪುಸ್ತಕದಲ್ಲಿ ಓದಿದ ಐತಿಹಾಸಿಕ ಸಾಮ್ರಾಜ್ಯದ ಕುರಿತು ತಿಳಿಯಲು ಸಹಾಯಕವಾದವು. ಹಂಪೆಯ ಉತ್ಸವದಲ್ಲಿ ಹಾಕುತ್ತಿದ್ದ ಪುಸ್ತಕ ಮಳಿಗೆಯಲ್ಲಿ ಎಲ್ಲವನ್ನು ನೋಡಿ ಕೊನೆಗೆ ಒಂದೆರಡು ಪುಸ್ತಕ ತೆಗೆದುಕೊಳ್ಳುವ ಹವ್ಯಾಸ ಬೆಳೆದದ್ದು ಹಂಪಿ ಉತ್ಸವದಿಂದ .ಅಲ್ಲಿ ಮಾಡುತ್ತಿದ್ದ ವಸ್ತು ಪ್ರದರ್ಶನ ಹಾಗೂ ವಿವಿದ ಮಹಿಳಾ ಸಂಘಗಳ ತರಾವರಿ ತಿನಿಸು ಉತ್ಪಾದನೆ ಎಲ್ಲವನ್ನು ಕಂಡ ಪ್ರಪಂಚ ವಿಶಾಲವಾಗಿದೆ .ನೋಡುವುದು ಬಹಳ ಎಂದು ತಿಳಿಸಿಕೊಟ್ಟದ್ದು ಹಂಪಿ ಉತ್ಸವ . ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಮೊದಲ ಬಾರಿ ನೋಡಿದಾಗ ಹಂಪೆಯ ಗತವೈಭವ ಕಣ್ಣಮುಂದೆ ಬಂದಂತೆ ಭಾಸವಾಗಿತ್ತು. ಉತ್ಸವದ ನಿಮಿತ್ತ ಏರ್ಪಡಿಸುವ ಗ್ರಾಮೀಣ ಕ್ರೀಡಾಕೂಟ ಹಾಗೂ ಕುಸ್ತಿ ಪಂದ್ಯಾವಳಿ ನೋಡಿದಾಗ ವಿಜಯನಗರದ ಕೆಚ್ಚು ನಮ್ಮಲ್ಲೂ ತುಸು ಹೆಚ್ಚೆ .ಈ ನೆಲದ ಪರಂಪರೆ ಇಲ್ಲಿನ ಎಲ್ಲರಲ್ಲೂ ತುಸುವಾದರು ಇದೆ ಎಂದೆನ್ನಿಸಿ ,ವಿಜಯನಗರದ ಕುರಿತು ಇತಿಹಾಸ ಪ್ರಜ್ಞೆ ಮೂಡಲು ಹಂಪಿ ಉತ್ಸವ ಕಾರಣವಾಯಿತು

ಹಂಪಿ ಉತ್ಸವಕ್ಕೆ ನಮ್ಮೂರಿನಿಂದ ಗುಂಪು ಗುಂಪಾಗಿ ಬಂದು ಹೋಗಿದ್ದು ಇದೆ. ನಾವು ಪೋಲಿಗಳು ಮೂರುದಿನ ತಂಗಿದರೆ. ಅಪ್ಪನವಾರಗೆಯವರು ಸಂಜೆ ಬಂದು ರಾತ್ರಿ ಮುಖ್ಯಕಾರ್ಯಕ್ರಮಗಳ ನೋಡಿ ನಸುಕಿಗೆ ಮನೆ ಸೇರುತ್ತಿದ್ದರು. ರಾಯಚೂರು ಜಿಲ್ಲೆಗೆ ಮೇಷ್ಟರು ಆಗಿ ಹೋಗಿದ್ದ ನಮ್ಮ ಊರಿನ ಅನ್ಸಾರ ಬಾಷ್ ಅವರು ಅಲ್ಲಿಂದ ಹಂಪಿ ಉತ್ಸವಕ್ಕೆ ವಿಧ್ಯಾಥಿಗಳನ್ನು ಉತ್ಸವ ತೋರಿಸುವ ಸಲುವಾಗಿ ಕರೆದುಕೊಂಡು ಬಂದಿದ್ದರು. ಉತ್ಸವ ತೋರಿಸಲು ವಿಧ್ಯಾರ್ಥಿಗಳನ್ನ ಮಕ್ಕಳಂತೆ ಪೋಷಿಸಿ ಅವರೊಳಗೆ ಇತಿಹಾಸದ ಕುರಿತು ತಿಳಿಸುವ ಇಂತಹ ಮೇಷ್ಟುಗಳ ಪರಂಪರೆ ನಮ್ಮಲ್ಲಿ ಇರುವುದೆ ಖುಷಿ.ನಮ್ಮೂರಿನ ಪಂಪಸೆಟ್ ಮೋಟಾರ ರೀಪೇರಿ ಮಾಡುವ ಹನುಮಂತಣ್ಣ ಆತನ ಸಂಗಾತಿ ಮಂಜಕ್ಕನೊಂದಿಗೆ ಹಂಪಿ ಉತ್ಸವದಲ್ಲಿ ಕಾಣಿಸಿಕೊಳ್ಳುತ್ತಿದ್ದ. ಏನ್ ಹನುಮಂತಣ್ಣ ನೀವು ಅಂದರೆ ? ಯಾಕಪ್ಪ ಉತ್ಸವ ನಿಮಗಷ್ಟೆ ಅಲ್ಲ ನಾವು ಬಂದವಿ ,ನಮಗೆ ನಾಟಕದ ಹುಚ್ಚು ಅದಕ್ಕ ಮೂರುದಿನ ನಾಟಕದ ವೇದಿಕೆಗೆ ನಡೆಯೋ ನಾಟಕ ನೋಡಕ ಬಂದವಿ ಅಂತಿದ್ದರು. ಅವರು ಇಬ್ಬರು ಲಿವಿಂಗ್ ಟೂಗೆದರ ಜೋಡಿಗಳಾಗಿದ್ದರು ಎಂಬುದನ್ನ ಗೆಳೆಯನೊಬ್ಬ ಹೇಳಿದ್ದ ನನಗೆ. ಹೀಗೆ ಹಂಪಿ ಉತ್ಸವ ವಯಸ್ಸಿನ ಹಂಗಿಲ್ಲದೆ ಎಲ್ಲರುನ್ನು ಸೆಳೆದಿತ್ತು. ಹಂಪಿ ಉತ್ಸವ ಜನಸಾಮಾನ್ಯರ ಉತ್ಸವ ಆಗಿತ್ತು

ಕೆಲ ವರ್ಷ ಹಂಪಿ ಉತ್ಸವವು ಬರಗಾಲ,ಕೊವಿಡ್ ಇತ್ಯಾದಿ ಕಾರಣಕ್ಕೆ ಸ್ಥಗಿತಗೊಂಡಿತ್ತು. ಕೆಲವೊಮ್ಮೆ ಕಾಟಾಚಾರಕ್ಕೆ ಎನ್ನುವಂತೆ ನಡೆದುಹೋಯಿತು. ನಮ್ಮ ಜಿಲ್ಲೆಯ ಹಿರಿಯ ಮುತ್ಸದ್ಧಿ ರಾಜಕಾರಣಿಗಳಾದ ಎಂ.ಪಿ ಪ್ರಕಾಶರವರ ಕನಸಿನ ಕೂಸು ಈ ಹಂಪಿ ಉತ್ಸವ ಎಂಬುದು ಅಪ್ಪ ಹೇಳುತ್ತಿದ್ದರು .ಕಾರ್ಯಕ್ರಮಗಳಿಂದ ಹಿಡಿದು ಉತ್ಸವ ಹೀಗೆ ನಡೆಯಬೇಕು ಎನ್ನುವ ಪರಿಕಲ್ಪನೆ ಹಾಕಿ ಕೊಟ್ಟದ್ದು ಪ್ರಕಾಶ ಸಾಹೆಬ್ರು ಅಂತೆ. ಹಾಗಾಗಿ ಹಂಪಿ ಉತ್ಸವ ಎಂಬುದು ಹಂಪಿಗಷ್ಟೆ ಸೀಮಿತವಾಗದೆ ಕನ್ನಡಿಗರೆಲ್ಲ ಪಾಲ್ಗೊಂಡು ನಾಡಿನ ಪರಂಪರೆ,ಕಲೆ ,ಸಂಗೀತಾ.ನಾಟಕ, ಎಲ್ಲವನ್ನು ಮೆಲಕು ಹಾಕಿ ,ನಮ್ಮ ನೆಲದ ಇತಿಹಾಸವನ್ನು ಇಂದಿನ ಪೀಳಿಗೆಗೆ ತಲುಪಿಸುವುದರ ಗುರುತರ ಕೆಲಸವನ್ನು ಹಂಪಿ ಉತ್ಸವ ಮಾಡುವುದು.ಈ ವರ್ಷ ನಡೆಯುವ ಹಂಪಿ ಉತ್ಸವಕ್ಕೆ ಮತ್ತೆ ಹಳೆಯ ನೆನಪುಗಳೊಂದಿಗೆ ಹೊಸದಾಗಿ ಸಿಗುವ ಅನುಭವಗಳನ್ನು ನನ್ನ ಮನದ ಜೋಳಿಗೆಯೊಳಗೆ ಕಾಪಿಡಲು ನಾನು ಅಣಿ ಆಗಿರುವೆ...



## ಸಂಶೋಧನಾರ್ಥಿ ಓ.ಮಂಜುನಾಥ ನಿಧನ

**ಹಂಪಿ ಟೈಮ್ಸ್ ಹೊಸಪೇಟೆ:**
ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಹಿರಿಯ ಸಂಶೋಧನಾ ವಿದ್ಯಾರ್ಥಿಯಾಗಿದ್ದ ಓ. ಮಂಜುನಾಥ ಅವರು ಬುಧವಾಋ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದರಿಂದ ಕನ್ನಡ ವಿವಿಯಲ್ಲಿ ಸಂತಾಪ ಸಭೆ ನಡೆಯಿತು.

ಮೃತರ ಸಂಶೋಧನಾ ಬದ್ಧತೆ ಮತ್ತು ಶೈಕ್ಷಣಿಕ ಹಾಗೂ ಕೌಟುಂಬಿಕ ಹಿನ್ನೆಲೆಯ ದೂರದೃಷ್ಟಿಯ ಕುರಿತು ಪ್ರಾಧ್ಯಾಪಕರಾದ ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ ಮತ್ತು ಪ್ರೊ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಸಂತಾಪ ನುಡಿಗಳನ್ನಾಡಿದರು. ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಎಲ್ಲರು ಸೇರಿ ಮೌನ ಆಚರಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಅರ್ಪಿಸಿದರು.



ಓ. ಮಂಜುನಾಥ

## ನುಡಿದಂತೆ ನಡೆಯದ ಕೈ ಸರ್ಕಾರ

ಮೊದಲ ಪುಟದಿಂದ

ಸ್ಥಾಪನೆಗೆ ಭೂಮಿಪೂಜೆ ನೆರವೇರಿಸಬೇಕು. ರೈತರಿಗೆ ಸುಳ್ಳು ಭರವಸೆಗಳನ್ನು ನೀಡುತ್ತಾ ಹೋದರೆ ಭವಿಷ್ಯದಲ್ಲಿ ತಿನ್ನಲು ಅನ್ನ ಬೆಳೆಯುವವರು ಇಲ್ಲದಂತಾಗುತ್ತಾರೆ. ಕೃಷಿ ವಿರೋಧಿ ಕಾನೂನುಗಳನ್ನು ಕೊಟ್ಟ ಮಾತಂತೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ನುಡಿದಂತೆ ನಡೆಯದ ಸರ್ಕಾರ ಎಂಬ ಪಟ್ಟ ನಿಮ್ಮದಾಗಲಿದೆ ಎಂದರು.

ನಗರದ ಮಹಾತ್ಮಗಾಂಧಿ ವೃತ್ತದಿಂದ ಡಾ.ಪುನೀತ್‌ರಾಜಕುಮಾರ ವೃತ್ತ ಮಾರ್ಗವಾಗಿ ತಾಲೂಕು ಕಚೇರಿಗೆ ಪ್ರತಿಭಟನೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಹೇಮರೆಡ್ಡಿ, ಹೆಚ್.ಜಿ.ಮಲ್ಲಿಕಾರ್ಜುನ, ಜೆ.ನಾಗರಾಜ, ಕೆ.ಹೆಚ್. ಮಹಂತೇಶ್, ಕೆ.ಹುಲುಗಪ್ಪ, ಕೊಟ್ರಪ್ಪ, ಎಲ್.ಎಸ್.ರುದ್ರಪ್ಪ, ಡಿ.ಮಂಜು, ಕೋರಿ ಸಿದ್ದೇಶ್, ಸಿದ್ದನಗೌಡ, ಎನ್.ಪಾಪಯ್ಯ, ಮಲ್ಲಿಕಾರ್ಜುನ ಸೇರಿದಂತೆ ಅನೇಕು ಇದ್ದರು.



ಕವಿ ಮನಸು

## ಹೆಮ್ಮೆಯ ಗಣ ರಾಷ್ಟ್ರವು

ಗಣ.. ಗಣಗಳ.. ಕೂಟವು
ಗಣಗಳ ಕೂಟ ಒಕ್ಕೂಟವು
ವಿವಿಧತೆಯಲಿ ಏಕತೆಯು
ಇದೇ ಮಹಾ ಕೂಟ ಒಕ್ಕೂಟವು

ಭಾರತವಿದು ಗಣಗಳ ಕೂಟವು
ಹಲವು ಧರ್ಮ ಭಾಷೆಗಳ ಮೇಳವು
ಭಿನ್ನ ವಿಭಿನ್ನ ಸಂಸ್ಕೃತಿ ಜೀವನವು
ಇದೇ ಮಹಾ ಕೂಟ ಒಕ್ಕೂಟವು

ದ್ರಾವಿಡಾರ್ಯ ಜೊತೆ ಜೊತೆಯಲಿ
ಶೈವ ದೈವ ಭವ್ಯ ನೆಲ ತಳದಲಿ
ಯಜಮಾನ್ಯ ಗುಲಾಮ ನೋಟದಲಿ
ಇದೇ ಭಾರತ ಚರಿತ್ರೆಯ ಕೂಟವು

ಆರ್ಯ ವರ್ಣ ಮೇಲ್ಮೆಯಲಿ
ಶೂದ್ರ ವರ್ಣ ಕೀಳರಿಮೆಯಲಿ
ಕಪ್ಪು ಶ್ರಮಿಕರ ಶೋಷಣೆಯಲಿ
ಶತ ಶತಮಾನದ ಕರಾಳ ಕೂಟವು

ಬುದ್ಧ ಬಸವ ಅಂಬೇಡ್ಕರರು..
ಭಾರತದ ಚರಿತ್ರೆ ಕಂಡರಿದರು
ಸಮಪಾಲು ಸಮಬಾಳೆಂದರು
ಸರ್ವ ಜನರ ಜೀವ ಹಸನಿಸಿದರು

ಬ್ರಿಟೀಷ್ ಮುಕ್ತ ಭಾರತವು
ಆಧುನಿಕ ವಿಶಾಲ ಭಾರತವು
ಪ್ರಜಾ ಗಣ ತಂತ್ರ ಸ್ವತಂತ್ರ ಭಾರತವು
ಅಂಬೇಡ್ಕರ್ ಸಂವೀಧಾನಿಕ ಭಾರತವು
ಹೆಮ್ಮೆಯ ಗಣ ರಾಷ್ಟ್ರದ ಮಹಾ ಕೂಟವು.

– **ಸೋ.ದಾ.ವಿರೂಪಾಕ್ಷಗೌಡ**
ಹೊಸಪೇಟೆ.

## ಅಲೋವೆರಾ ಎಂಬ ಸ್ವಯಂ ಸ್ಫೂರ್ತಿ.

ಗಿಡ ಬೆಳೆಯಲು ಬೇಕು, ಫಲವತ್ತತೆ
ಮಣ್ಣು,
ತಂಪಾದ ನೀರು, ಸೂರ್ಯನ ಬೆಳಕು.
ಇದು ಯಾವುದು ಇದ್ದರು ಇಲ್ಲದಿದ್ದರೂ
ಗಾಳಿಯಲ್ಲಿನ ತೇವವೇ ಸಾಕು ಎನಗೆ
ತಂಪಾದ ನೀರು ಉಣಿಸದಿದ್ದರೆ ಏನಂತೆ.
ಸೂರ್ಯನ ಬೆಳಕು ಎನ್ನ ಸೋಕದಿದ್ದರೆ
ಏನಂತೆ ತಾನೇ ತಲೆ ಬಾಗಿ ಬೆಳಕನ್ನು
ಮುಟ್ಟುವಂತೆ ಬೆಳೆದು ನಿಲ್ಲುವಂತೆ.
ತನಗೆ ತಾನೇ ಪೋಷಿಸಿಕೊಳ್ಳುವ
ಅಲೋವೆರಾ ಎಂಬ ಸ್ವಯಂ ಸ್ಫೂರ್ತಿ.
ಮನುಕುಲಕ್ಕೆ ಹೇಳಿಕೊಡುವ ಸಾಧಿಸುವ
ರೀತಿ
ಬೇರೆಯಾವ ಕಥೆಯಲ್ಲಿಯು ಸಿಗದು ಈ
ನೀತಿ.

– **ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



| ಗುರುವಾರ : 25-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.68 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 539 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.965 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1618.19 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8173 ಕ್ಯುಸೆಕ್ |
| ಸಾಮರ್ಥ್ಯ | 56.399 ಟಿಎಂಸಿ |

## ಒದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಗಣರಾಜ್ಯೋತ್ಸವದ ಶುಭಾಶಯಗಳು

# ಗಣರಾಜ್ಯೋತ್ಸವ ಒಂದು ಅವಲೋಕನ

1947ರಲ್ಲಿ ನಮ್ಮ ಭಾರತ ದೇಶವು ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರವಾಯಿತಷ್ಟೇ, ಆದರೆ ನಮಗೆ ನಮ್ಮದೇ ಆದ ಸಂವಿಧಾನ ಇಲ್ಲದೆ ಇರುವುದರಿಂದ ಸ್ವತಂತ್ರದ ನಂತರವೂ ಕೂಡ ಭಾರತ ದೇಶವು ತನ್ನದೇ ಆದ ಸಂವಿಧಾನವನ್ನು ಹೊಂದುವವರೆಗೆ ಕಿಂಗ್ ಜಾರ್ಜ್‌ರ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು.

1929 ರಲ್ಲಿ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಸಭೆಯಲ್ಲಿ ಸಂಪೂರ್ಣ ಸ್ವತಂತ್ರ ಭಾರತ ದೇಶವನ್ನು ಪಡೆಯುವ ಒಕ್ಕೊರಲಿನ ಧ್ವನಿ ಹೊಮ್ಮಿತು. ಇದರ ಪರಿಣಾಮವಾಗಿ 1930ರ ಜನವರಿ 26ರಂದು ಭಾರತ ದೇಶವನ್ನು ಪೂರ್ಣ ಸ್ವರಾಜ್ ದೇಶ ಎಂದು ಘೋಷಿಸಲಾಯಿತು. ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ಜನವರಿ 26ರ ಈ ದಿನ ಅತ್ಯಂತ ಮಹತ್ವಪೂರ್ಣ ಎನಿಸಿತ್ತು.

1945ರಲ್ಲಿ ದ್ವಿತೀಯ ಮಹಾಯುದ್ಧ ಮುಗಿದ ನಂತರ ಭಾರತದ ಸ್ವಾತಂತ್ರ್ಯದ ಕೂಗು ಮತ್ತಷ್ಟು ಜೋರಾಯಿತು. ಇನ್ನು ತಮಗೆ ಭಾರತದಲ್ಲಿ ಉಳಿಗಾಲವಿಲ್ಲ ಎಂದು ಅರಿತ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಮುನ್ನ ಮೂರು ಜನ ಬ್ರಿಟನ್ ಸದಸ್ಯರ ಒಂದು ನಿಯೋಗವನ್ನು ಭಾರತಕ್ಕೆ ಕಳುಹಿಸಿ ಇಲ್ಲಿನ ವಿಷಯಗಳನ್ನು ಅಧ್ಯಯನ ಮಾಡಿ ಸುಗಮ ಆಡಳಿತವನ್ನು ನಡೆಸಲು ಭಾರತ ತನ್ನದೇ ಆದ ಸಂವಿಧಾನವನ್ನು ಹೊಂದಬೇಕು ಅದಕ್ಕಾಗಿ ತನ್ನದೇ ರಾಜ್ಯಾಂಗದ ಸದಸ್ಯರ ಒಂದು ಸಮಿತಿಯನ್ನು ನಿರ್ಮಿಸಿ ಆ ಸಮಿತಿಯ ಎಲ್ಲಾ ಸದಸ್ಯರ ಅನುಮತಿಯ ಮೇರೆಗೆ ಸಂವಿಧಾನದ ಕರಡು ಪ್ರತಿಯನ್ನು ತಯಾರಿಸಲಿ ಎಂದು 1946ರ ಮಾರ್ಚ್ 16ರಂದು ವರದಿ ಸಲ್ಲಿಸಿತು.

ಮುಂದೆ 1946ರ ಡಿಸೆಂಬರ್ ನಲ್ಲಿ ರಾಜ್ಯಾಂಗ ರಚನಾ ಸಭೆಗೆ ಚುನಾವಣೆಗಳು ನಡೆದು 297 ಜನ ಸದಸ್ಯರು ಆಯ್ಕೆಯಾದರು. ಡಿಸೆಂಬರ್ ಒಂಬತ್ತರಂದು ನಡೆದ ರಾಜ್ಯಾಂಗ ರಚನಾ ಸಭೆಗೆ ಸುಮಾರು 207 ಜನರು ಹಾಜರಿದ್ದರು. ಮುಂದಿನ ಎರಡು ದಿನಗಳಲ್ಲಿ ಬಾಬು ರಾಜೇಂದ್ರ ಸಿಂಗ್ ಪ್ರಸಾದ್ ಅವರನ್ನು ರಾಜ್ಯಾಂಗ ರಚನಾ ಸಭೆಯ ಖಾಯಂ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಈಗಾಗಲೇ ಬೆಂಗಾಲ ಪ್ರಾಂತ್ಯದಿಂದ ಆಯ್ಕೆಯಾಗಿ ಬಂದ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ರಾಜ್ಯಾಂಗ ಸಭೆಯ ಧ್ಯೇಯೋದ್ದೇಶಗಳನ್ನು ಕುರಿತು ಮಾತನಾಡಲು ಆಹ್ವಾನಿಸಿದಾಗ ಅತ್ಯಂತ ಸ್ಪಷ್ಟವಾಗಿ ಮಾತನಾಡಿದ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನೆಯ ಮಹತ್ವದ ಕುರಿತು ಬೆಳಕು ಚೆಲ್ಲಿದರು. ಇದಕ್ಕೂ ಮುನ್ನ ಜವಾಹರ ಲಾಲ್ ನೆಹರು ಅವರು ರಾಜ್ಯಾಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದರೂ ಕೂಡ ಅಂಬೇಡ್ಕರ್ ಅವರ ಮಂಡನೆಯಲ್ಲಿ ಹೆಚ್ಚಿನ ತೂಕ ಇರುವುದನ್ನು ಕಂಡು ಅವರಿಲ್ಲದೆ ಸಂವಿಧಾನದ ಕರಡು ರಚನೆ ಅಸಾಧ್ಯ ಎಂದು ಭಾವಿಸಿದ ರಾಜ್ಯಾಂಗ ಸಮಿತಿ 1947ರ ಜನವರಿ 24ರಂದು ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಅಧ್ಯಕ್ಷರನ್ನಾಗಿಸಿ ಸುಮಾರು 50 ಜನ ಸದಸ್ಯರ ಸಲಹಾ ಸಮಿತಿಯನ್ನು ರಚಿಸಿತು. ಈ ಸಲಹಾ ಸಮಿತಿಯಲ್ಲಿ ಮತ್ತೆ ನಾಲ್ಕು ಉಪ ಸಮಿತಿಗಳನ್ನು ರಚಿಸಿದರು.ಅವುಗಳು

1. ಮೂಲಭೂತ ಹಕ್ಕುಗಳ ಉಪಸಮಿತಿ
2 ಅಲ್ಪಸಂಖ್ಯಾತರ ಉಪ ಸಮಿತಿ
3 ಈಶಾನ್ಯ ಗಡಿ ನಿವಾಸಿಗಳ ಉಪಸಮಿತಿ
4 ಪ್ರತ್ಯೇಕ ಮತ್ತು ಭಾಗಶಃ ಪ್ರತ್ಯೇಕವಾದ ರಾಜ್ಯಗಳ ಉಪಸಮಿತಿ

ಈ ಉಪಸಮಿತಿಗಳಲ್ಲಿ ಮೊದಲೆರಡು ಉಪಸಮಿತಿಗಳ ಸದಸ್ಯರಾದ ಡಾಕ್ಟರ್ ಬಿ. ಆರ್. ಅಂಬೇಡ್ಕರ್ ಅವರು ಮೂಲಭೂತ ಹಕ್ಕುಗಳ ಉಪಸಮಿತಿಯಲ್ಲಿ ಹೆಚ್ಚಿನ ಆಸಕ್ತಿ ತೋರಿಸಿ ವಸ್ತುನಿಷ್ಠವಾದ ಟಿಪ್ಪಣಿಗಳನ್ನು ಮಾಡಿಕೊಟ್ಟರು. ಸುಮಾರು 60 ದೇಶಗಳ ಸಂವಿಧಾನವನ್ನು ಅಭ್ಯಸಿಸಿದ ಫಲವಾಗಿ ಹುಟ್ಟಿದ ವಿಚಾರಧಾರೆಗಳ ಗಟ್ಟಿ ಪಾಕವೇ ಅವರ ಸಂವಿಧಾನದ ಕರಡು ಪ್ರತಿಯ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿತು. ಮುಂದೆ 1947 ರ ಏಪ್ರಿಲ್ ನಲ್ಲಿ ಸಂವಿಧಾನ ರಚನಾ ಸಮಿತಿ ಮತ್ತೆ ಮೂರು ಸಮಿತಿಗಳನ್ನು ರಚಿಸುತ್ತದೆ.

1 ಕೇಂದ್ರ ಅಧಿಕಾರ ಸಮಿತಿ
2 ಕೇಂದ್ರ ಸಂವಿಧಾನ ಸಮಿತಿ ಮತ್ತು
3 ತಾತ್ಕಾಲಿಕ ಸಂವಿಧಾನ ಸಮಿತಿ

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೇಂದ್ರ ಸಂವಿಧಾನ ಸಮಿತಿಯ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಮುಂದೆ ಸ್ವತಂತ್ರ ಭಾರತದ ಘೋಷಣೆ 1947 ಆಗಸ್ಟ್ 15ರಂದು ಆದಾಗ, ಭಾರತದಿಂದ ವಿಭಜನೆಗೊಂಡ ಬಂಗಾಳ ಪ್ರಾಂತ್ಯದಿಂದ ಆಯ್ಕೆಯಾಗಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸ್ವತಂತ್ರ ದೇಶದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರು ಅವರ ಆಹ್ವಾನದ ಮೇರೆಗೆ ಭಾರತ ದೇಶದ ಮೊದಲ ಕಾನೂನು ಮಂತ್ರಿಯಾಗಿ ಆಯ್ಕೆಯಾಗುತ್ತಾರೆ. ಮುಂದಿನ ಕೆಲವೇ ದಿನಗಳಲ್ಲಿ ಭಾರತೀಯ ಸಂವಿಧಾನದ ಕರಡು ಪ್ರತಿ ರಚನೆಯ ಅಧ್ಯಕ್ಷರಾಗಿ ಆಯ್ಕೆಯಾದ ಅಂಬೇಡ್ಕರ್ ಅವರ ಜೊತೆಗೆ ಏ ಕೃಷ್ಣಸ್ವಾಮಿ ಅಯ್ಯರ್, ಎನ್ ಗೋಪಾಲಸ್ವಾಮಿ ಅಯ್ಯಂಗಾರ್, ಕೆಎಂ ಮುನ್ಶಿ, ಮಹಮ್ಮದ್ ಸಾದುಲ್ಲ, ಬೀ ಎಲ್ ಮಿಟ್ಟರ್ ಮತ್ತು ಡಿ ಪಿ ಖೈತಾನ್ ಕರಡು ರಚನಾ ಸಮಿತಿಯ ಇನ್ನಿತರರು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ.

ಇವರೆಲ್ಲರ ಸತತ ಪ್ರಯತ್ನದ ಫಲವಾಗಿ ಹಲವರು ಸಭೆಗಳ ಮೂಲಕ ಮುಖ್ಯವಾಗಿ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನದ ಮೂಲ ಪ್ರತಿ ಸಿದ್ಧವಾಯಿತು. ಮತ್ತೆ ಅದರ ಕುರಿತ ಪರಿಶೀಲನಾ ಸಭೆ ಪರ ವಿರೋಧ ಚರ್ಚೆ, ಹಲವಾರು ಸುತ್ತಿನ ಸಭೆ ಮಾತು ಕತೆಗಳ ನಂತರ ಅಂತಿಮವಾಗಿ 1949 ನವಂಬರ್ 19 ರಂದು ಡಾಕ್ಟರ್ ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಂವಿಧಾನದ ಅಂತಿಮ ಪ್ರತಿ ಸುಮಾರು ಎರಡು ವರ್ಷ 17 ತಿಂಗಳುಗಳ ಅವಧಿಯಲ್ಲಿ ಸಿದ್ಧವಾಗಿ ಎಲ್ಲ ರೀತಿಯ ಪರಾಮರ್ಶೆಗೆ ಒಳಗಾಗಿ ತನ್ನ ಅಂತಿಮ ರೂಪರೇಶೆಗಳನ್ನು ಹೊಂದಿತು.

ಈ ಸಭೆಯಲ್ಲಿ ಮಾತನಾಡಿದ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರು ಭಾರತದಂತಹ ಸಾಮಾಜಿಕ, ಸಾಂಸ್ಕೃತಿಕ ಮತ್ತು ಮೌಲ್ಯಗಳನ್ನು ಹೊಂದಿದ ದೇಶದಲ್ಲಿ ಎಲ್ಲರಿಗೂ ಸಮಾನವಾದ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಘೋಷಿಸಲಾಗಿದ್ದು, ಎಲ್ಲರೂ ಕಾನೂನಿನ ಅಡಿಯಲ್ಲಿ ಸರ್ವ ಸಮಾನರು ಎಂದು ಸಾರಿದರು, ತಪ್ಪು ಮಾಡಿದವರಿಗೆ ಶಿಕ್ಷೆ ಕಡ್ಡಾಯ ಎಂಬ ಮಾತು ಅವರದಾಗಿತ್ತು. ಆರ್ಥಿಕ ಮತ್ತು ಔದ್ಯೋಗಿಕ ಮೌಲ್ಯವರ್ಧನೆಗೆ ಕಾನೂನು ಬದ್ಧ ಕಾರ್ಯನಿರ್ವಹಣೆ ಅತ್ಯಗತ್ಯ ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ಅತ್ಯಂತ ಕೆಳ ಹಂತದಲ್ಲಿರುವ, ದಲಿತ ದುರ್ಬಲರಿಗೆ ಸಂವಿಧಾನದ ಅಡಿಯಲ್ಲಿ ಕೆಲವು ಪ್ರತ್ಯೇಕ ಕಾನೂನುಗಳ ಮೂಲಕ ಮೇಲೆ ತರುವ ಸುಧಾ ಅವರ ಜೀವನ ಮಟ್ಟವನ್ನು ಸುಧಾರಿಸುವ ಕ್ರಮದ ಅವಶ್ಯಕತೆಯನ್ನು ಸದಸ್ಯರಿಗೆ ಮನದಟ್ಟು ಮಾಡಿಕೊಟ್ಟರು.ಸರ್ವರಿಗೂ ಸಮಪಾಲು ಸಮ ಬಾಳು ಎಂಬ ಘೋಷದ ಮೂಲಕ ಸಂವಿಧಾನದ ಮೂಲ ಉದ್ದೇಶವನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟರು. ಭಾರತದಂತಹ ಹಲವಾರು ಜಾತಿ, ಧರ್ಮ, ಭಾಷೆಗಳನ್ನು ಮಾತನಾಡುವ ದೇಶಕ್ಕೆ ಅತ್ಯಗತ್ಯವಾದ ಸಾಂವಿಧಾನಿಕ ಮಾನ್ಯತೆಗಳನ್ನು ದೊರಕಿಸಿಕೊಡಲು ಹಗಲಿರುಳು ಶ್ರಮಿಸಿದ ಸಂವಿಧಾನ ಕರಡು ರಚನಾ ಸಮಿತಿಯ ಶ್ರಮದ ಫಲವೇ ಒಟ್ಟು 395 ವಿಧಿಗಳು ಮತ್ತು ಎಂಟು ಅನುಸೂಚಿಗಳನ್ನು ಹೊಂದಿರುವ ಸಾವಿರಾರು ಬಾರಿ ತಿದ್ದುಪಡಿ ಮಾಡಲ್ಪಟ್ಟು ತಯಾರಾದ ಸಂವಿಧಾನದ ಕರಡು ಪ್ರತಿಯನ್ನು ಆ ದಿನ ಡಾಕ್ಟರ್ ಬಿ. ಆರ್. ಅಂಬೇಡ್ಕರ್ ಅವರು ಅಂದಿನ ರಾಷ್ಟ್ರಪತಿ ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದ್ ಅವರಿಗೆ ಹಸ್ತಾಂತರಿಸಿದರು. ಇಂದಿಗೂ ಜಗತ್ತಿನ ಅತಿ ದೊಡ್ಡ ಜನತಂತ್ರ ವ್ಯವಸ್ಥೆಯ ದೇಶವಾಗಿರುವ ಭಾರತದ ಸಂವಿಧಾನದ ಮಹತ್ವದ ಕುರಿತು ಎರಡು ಮಾತಿಲ್ಲ ಎಂಬುದು ಅತಿಶಯೋಕ್ತಿಯೇನಲ್ಲ.



**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**

ಈ ಸಂವಿಧಾನವನ್ನು 1950 ಜನವರಿ 26ರಂದು ಜಾರಿಗೆ ತರಲಾಯಿತು. ಅಂದಿನಿಂದಲೇ ಸ್ವತಂತ್ರ ಭಾರತದ ಗ ಣ ರಾ ಜ್ಯೋ ತ್ಸ ವ ವ ನ್ನು ಘೋಷಿಸಲಾಯಿತು. 1930ರ ಜನವರಿ 26ರ ಪೂರ್ಣ ಸ್ವರಾಜ್ ದಿವಸವನ್ನು ನೆನಪಿನಲ್ಲಿಟ್ಟುಕೊಂಡು ಆ ದಿನವನ್ನೇ ಸ್ವತಂತ್ರ ಗಣರಾಜ್ಯದ ಸಂವಿಧಾನ ದಿನವನ್ನಾಗಿ ಆಚರಿಸಲಾರಂಭಿಸಿದರು.

ಪ್ರತಿ ವರ್ಷವೂ ಗಣರಾಜ್ಯೋತ್ಸವದ ಈ ದಿವಸವನ್ನು ಪ್ರತಿಯೊಂದು ಶಾಲೆ, ಕಾಲೇಜುಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ. ವಿವಿಧತೆಯಲ್ಲಿ ಏಕತೆಯನ್ನು ತೋರುವ ಭಾರತೀಯ ಸಂಸ್ಕೃತಿ ಪರಂಪರೆಯ ಕುರಿತಾದ ದೇಶಭಕ್ತಿ ಗೀತೆಗಳು ಮನೆ ಮನೆಗಳಲ್ಲಿ ಹೊಮ್ಮುತ್ತವೆ.

ದೇಶದ ರಾಜಧಾನಿ ದೆಹಲಿಯಲ್ಲಿ ಗಣರಾಜ್ಯೋತ್ಸವದ ದಿನ ಧ್ವಜಾರೋಹಣ ಮಾಡುತ್ತಾರೆ. ಸ್ವಾತಂತ್ರ್ಯೋತ್ಸವದ ದಿನ ದೇಶದ ಪ್ರಧಾನ ಮಂತ್ರಿಗಳು ಕೆಂಪುಕೋಟೆಯ ಮೇಲೆ ನಮಗೆ ಸ್ವಾತಂತ್ರ್ಯ ಸಿಕ್ಕ ಐತಿಹಾಸಿಕ ಘಳಿಗೆಯ ದ್ಯೋತಕವಾಗಿ ಕೆಳಗಿನಿಂದ ಮೇಲಕ್ಕೆ ಎಳೆಯುತ್ತಾ ಧ್ವಜವನ್ನು ಹಾರಿಸಿದರೆ, ಜನವರಿ 26ರ ದಿನ ಗಣರಾಜ್ಯೋತ್ಸವದ ಅಂಗವಾಗಿ ರಾಷ್ಟ್ರಪತಿಯವರು ರಾಜಧಾನಿ ದೆಹಲಿಯ ಜನಪಥ ದಲ್ಲಿ ಧ್ವಜಸ್ತಂಭದ ಮೇಲೆ ಕಟ್ಟಿದ ಧ್ವಜವನ್ನು ಎಳೆಯದೆ ಹಾರಿಸುತ್ತಾರೆ. ಇದು ಗಣರಾಜ್ಯೋತ್ಸವದ ವೈಶಿಷ್ಟತೆಯಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ವಿದೇಶಿ ಗಣ್ಯರನ್ನು ಕೂಡ ಆಹ್ವಾನಿಸಲಾಗಿರುತ್ತದೆ.

ಧ್ವಜಾರೋಹಣದ ನಂತರ ರಾಷ್ಟ್ರಪತಿಯವರು ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುತ್ತಾರೆ. ನಂತರ ನಮ್ಮ ದೇಶದ ಸರ್ವೋಚ್ಚ ನಾಯಕರಾದ ರಾಷ್ಟ್ರಪತಿಯವರಿಗೆ ಭಾರತ ದೇಶದ ಮಿಲಿಟರಿಯ ಮೂರು ಪಡೆಗಳಾದ ಭೂ ಸೇನೆ, ನೌಕಾ ಸೇನೆ ಮತ್ತು ವಾಯು ಸೇನೆಗಳ ಮುಖ್ಯ ಅಧಿಕಾರಿಗಳು ತಂತಮ್ಮ ತಂಡಗಳೊಂದಿಗೆ ಪೆರೇಡ್ ನಲ್ಲಿ ಭಾಗವಹಿಸಿ ಗೌರವ ಸಲ್ಲಿಸುತ್ತಾರೆ. ಇದರ ಜೊತೆ ಜೊತೆಗೆ ಯುದ್ಧ ವಾಹನಗಳು, ನೌಕೆಗಳು ಮತ್ತು ಮಿಗ್ ವಿಮಾನಗಳನ್ನು, ನಮ್ಮ ದೇಶದ ಮಿಲಿಟರಿ ಪಡೆಯ ಸಾಮರ್ಥ್ಯವನ್ನು ಸಾರುವ ಈ ಗಣರಾಜ್ಯೋತ್ಸವದ ಪಥಸಂಚಲನದ ಪೆರೇಡ್ ವಿಶ್ವ ಪ್ರಸಿದ್ಧವಾಗಿದೆ. ಮಿಲಿಟರಿ ಪಡೆಗಳ ಜೊತೆಗೆ ಗಡಿ ಭದ್ರತಾ ಪಡೆ, ಅರೆ ಸೈನಿಕ ಪಡೆ, ಗೃಹರಕ್ಷಕ ದಳ,ಎನ್ ಸಿ ಸಿ, ಭಾರತ ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ದೇಶದ ವಿವಿಧ ಭಾಗಗಳಿಂದ ಆಯ್ಕೆಯಾದ ವಿದ್ಯಾರ್ಥಿಗಳ ತಂಡಗಳು ಕೂಡ ಪಥಸಂಚಲದಲ್ಲಿ ಭಾಗವಹಿಸುತ್ತವೆ. ಈ ಪಥ ಸಂಚಲನಕ್ಕೆ ತಿಂಗಳುಗಟ್ಟಲೆ ಮುಂಚೆಯೇ ತರಬೇತಿ ನೀಡಲಾಗುತ್ತದೆ. ಸುಮಾರು ಎರಡು ಕಿಲೋಮೀಟರ್ ಗಿಂತಲು ಹೆಚ್ಚು ದೂರ ಸಾಗುವ ಈ ಆಕರ್ಷಕ ಪಥಸಂಚಲನದಲ್ಲಿ ವಿವಿಧ ರಾಜ್ಯಗಳ ಸಾಂಸ್ಕೃತಿಕ ಇಲಾಖೆಗಳು ತಂತಮ್ಮ ರಾಜ್ಯಗಳ ವಿಶಿಷ್ಟತೆಗಳನ್ನು ಕಟ್ಟಿಕೊಡುವ ಸ್ತಬ್ಧ ಚಿತ್ರಗಳ ಸಮೇತ ಭಾಗವಹಿಸಿ ಬಹುಮಾನ ಗಳಿಸುತ್ತಾರೆ. ವಿವಿಧ ರಂಗಗಳಲ್ಲಿ ಪ್ರಶಸ್ತಿ ಪಡೆದ ಮಕ್ಕಳನ್ನು, ಯುವಕರನ್ನು, ಸೈನಿಕರನ್ನು ಮತ್ತು ನಾಗರಿಕರನ್ನು ಇಂದು ಆಯಾ ಸ್ಥಳಗಳಲ್ಲಿ ಗೌರವಿಸಲಾಗುತ್ತದೆ.

ಒಟ್ಟಿನಲ್ಲಿ ಭಾರತ ದೇಶದ ಸಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಈ ದಿನ ಪ್ರತಿ ಭಾರತೀಯನ ಮನೆ ಮನಗಳ ಹಬ್ಬವಾಗಿ ಪರಿಣಮಿಸಿದ್ದು ದೇಶ, ಭಾಷೆ, ಭೌಗೋಳಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯತ್ಯಾಸಗಳ ನಡುವೆಯೂ ವಿವಿಧತೆಯಲ್ಲಿ ಏಕತೆಯನ್ನು ಸಾರುವ ಸಾರೆ ಜಹಾಸೆ ಅಚ್ಚಾ ಹಿಂದೂಸ್ತಾನ್ ಹಮಾರ ಎಂಬ ಘೋಷಣೆ ಎಲ್ಲೆಡೆ ಅನುರಣಿಸುತ್ತದೆ.



# ಅನುದಾನ ಕೊರತೆಯಿಲ್ಲ, ಅಧಿಕಾರಿಗಳು ಇಚ್ಛಾಶಕ್ತಿತೋರಬೇಕು

**ವಿಜಯನಗರ ಜಿಲ್ಲೆಯ ಬರ ಪರಿಸ್ಥಿತಿ ಅವಲೋಕಿಸಿದ ಸಚಿವ ಜಮೀರ್ ಖಾನ್ ಹೇಳಿಕೆ । ನಗರಸಭೆ ವ್ಯಾಪ್ತಿಯಲ್ಲಿ ದೂರುಗಳು ಹೆಚ್ಚಿವೆ, ಹೇಳ್ದೇ ಎಲ್ಲಾ ವಾರ್ಡಿಗೂ ಭೇಟಿ**

**473 ಗ್ರಾಮಗಳು ಮುಂಬರುವ ತಿಂಗಳಿನಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಬಹುದು । ವಿಜಯನಗರ ಜಿಲ್ಲೆಯಲ್ಲಿ ಶೇ.74ರಷ್ಟು ಮಳೆ ಕೊರತೆ.**

■ **ಹಂಪಿ ಟೈಮ್ಸ್ ಹೊಸಪೇಟೆ**

ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಜನವರಿ 25ರಂದು ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂ ಹಾಲನಲ್ಲಿ ಸಭೆ ನಡೆಸಿ ಬರ ನಿರ್ವಹಣೆಯ ಕುರಿತು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಸಚಿವರು, ಮಳೆ ಕೊರತೆ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಬರದ ಛಾಯೆಯಿದೆ. ಇದಕ್ಕೆ ವಿಜಯನಗರ ಜಿಲ್ಲೆ ಸಹ ಹೊರತಾಗಿಲ್ಲ. ಮಳೆ ಅಭಾವದಿಂದಾಗಿ ಜನರು ಕುಡಿಯುವ ನೀರಿನ ಭಾದೆಯನ್ನು ಅನುಭವಿಸಬಾರದು. ವಿಪತ್ತು ನಿರ್ವಹಣೆಗೆ ಯಾವುದೇ ರೀತಿಯ ಅನುದಾನ ಕೊರತೆಯಿಲ್ಲ. ಸಮಸ್ಯೆ ಕಂಡುಬರುವ ಗ್ರಾಮಗಳ ಪಟ್ಟಿ ಮಾಡಿ ಅಂತಹ ಕಡೆಗಳಲ್ಲಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು ಎಂದು ಸಚಿವರು ಇದೆ ವೇಳೆ ನಿರ್ದೇಶನ ನೀಡಿದರು.

ಈ ವೇಳೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮಾತನಾಡಿ, ಹೊಸಪೇಟೆ ತಾಲೂಕಿನಲ್ಲಿ 15, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 4 ಹಾಗೂ ಹರಪನಹಳ್ಳಿ ತಾಲೂಕಿನಲ್ಲಿ 27 ವಾರ್ಡಗಳು ಸೇರಿದಂತೆ ಹೊಸಪೇಟೆ ತಾಲೂಕಿನಲ್ಲಿ 69, ಹಡಗಲಿ ತಾಲೂಕಿನಲ್ಲಿ 112, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 33, ಹರಪನಹಳ್ಳಿ ತಾಲೂಕಿನಲ್ಲಿ 190, ಕೊಟ್ಟೂರ ತಾಲೂಕಿನಲ್ಲಿ 40, ಕೂಡ್ಲಿಗಿ ತಾಲೂಕಿನಲ್ಲಿ 29 ಸೇರಿ ಒಟ್ಟು 473 ಗ್ರಾಮಗಳು ಮುಂಬರುವ ತಿಂಗಳಿನಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಬಹುದು ಎಂದು ಅಂದಾಜಿಸಲಾಗಿದೆ. ಕುಡಿಯುವ ನೀರು ಕೊರತೆಯಾಗಬಹುದಾದ ಗ್ರಾಮ ವಾರ್ಡಗಳಲ್ಲಿ ಒಪ್ಪಂದಕ್ಕಾಗಿ 578 ಬೋರ್‌ವೆಲ್ ಗುರುತಿಸಲಾಗಿದೆ. ಗುರುತಿಸಲಾದ ಬೋರವೆಲ್‌ಗಳಲ್ಲಿ 481 ಬೋರವೆಲ್‌ಗಳಿಗೆ ಮುಂಗಡ ಒಪ್ಪಂದವಾಗಿದೆ. ಆರು ತಾಲೂಕುಗಳು ಸೇರಿ ಒಟ್ಟು 3,62,710 ಟನ್‌ಗಳಷ್ಟು ಮೇವಿನ ಲಭ್ಯತೆ ಇದೆ. ಇನ್ನು 21 ವಾರಗಳಿಗೆ ಸಾಕಾಗುವಷ್ಟು ಮೇವಿನ ಲಭ್ಯತೆ ಇದೆ ಎಂದು ತಿಳಿಸಿದರು.



ವಿಜಯನಗರ ಜಿಲ್ಲೆಯಲ್ಲಿ ಒಟ್ಟು 786 ವಸತಿಯುತ ಜನಪ್ರದೇಶಗಳಿದ್ದು, ಮಳೆ ಕೊರತೆಯಾಗಿರುವುದರಿಂದ ಸಮಸ್ಯೆ ಎದುರಿಸಬಹುದಾದ ಗ್ರಾಮ ಪಂಚಾಯತ್‌ಗಳು ಎಷ್ಟು ಎಂಬುದರ ಬಗ್ಗೆ ಮಾಹಿತಿ ಪಡೆಯಲಾಗಿದೆ. ಖಾಸಗಿ ಬೋರವೆಲ್ ವ್ಯವಸ್ಥೆಯಾಗದಿದ್ದಲ್ಲಿ ಜಲಜೀವನ ಮಿಷನ್ ಯೋಜನೆಯಡಿ ಬೋರವೆಲ್ ಕೊರೆಯಿಸಲು ಕ್ರಿಯಾ ಯೋಜನೆಗೆ ಅನುಮೋದನೆಯಾಗಿದೆ. 15ನೇ ಹಣಕಾಸು ಯೋಜನೆಯ ಅನುದಾನವನ್ನು ಕೂಡ ಬಳಸಿಕೊಳ್ಳಲಾಗುತ್ತಿದೆ. ಪರಿಸ್ಥಿತಿ ತೀರಾ ಹದಗೆಟ್ಟರೆ ಟ್ಯಾಂಕರ್ ಮೂಲಕ ಜನರಿಗೆ ನೀರು ಪೂರೈಸಲು ಕ್ರಮವಹಿಸಲಾಗುವುದು ಎಂದರು. ಸದ್ಯ 23 ಬೋರವೆಲ್‌ಗಳನ್ನು ಬಾಡಿಗೆ ಪಡೆದುಕೊಂಡಿದ್ದೇವೆ ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯಲ್ಲಿ ಶೇ.74ರಷ್ಟು ಮಳೆ ಕೊರತೆ. ಜನವರಿಯಲ್ಲಿ ಸಹ ಮಳೆ ಕೊರತೆ ಮುಂದುವರೆದಿದೆ. ಇದರಿಂದಾಗಿ ಮೇವಿನ ಭವಣೆ ಹೆಚ್ಚಾಗಬಹುದಾಗಿದೆ. ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗದಿರಲು ಎಲ್ಲಾ ರೀತಿಯ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಕೃಷಿ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಗರಸಭೆ ಅಧಿಕಾರಿಗಳಿಗೆ ಎಚ್ಚರಿಕೆ: ಹೊಸಪೇಟೆ ನಗರಸಭೆಯಿಂದ ಯಾವ ಕಾರ್ಯವೂ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ದೂರುಗಳು ಹೆಚ್ಚುತ್ತಿದ್ದು ಈ ಅವ್ಯವಸ್ಥೆ ಮುಂದುವರೆದಲ್ಲಿ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಸಚಿವರು ಇದೆ ವೇಳೆ ನಗರಸಭೆ ಅಧಿಕಾರಿಗಳಿಗೆ ಸಚಿವರು ಎಚ್ಚರಿಕೆ ನೀಡಿದರು. ಹಂಪಿ ಉತ್ಸವದ ಮುಗಿದ ಬಳಿಕ ಹೊಸಪೇಟೆ ನಗರ ಸಂಚಾರಕೈಗೊಂಡು ಖುದ್ದು ವಾಸ್ತವ ಪರಿಸ್ಥಿತಿ ಪರಿಶೀಲಿಸುವೆ. ಅಧಿಕಾರಿಗಳು ಕಾಲಮಿತಿಯೊಳಗಡೆ ಅವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಸಭೆಯಲ್ಲಿ ಸಂಸದರಾದ ವೈ ದೇವೇಂದ್ರಪ್ಪ, ಶಾಸಕರಾದ ಹೆಚ್.ಆರ್.ಗವಿಯಪ್ಪ, ಎಂ.ಪಿ.ಲತಾ, ನೇಮಿರಾಜ ನಾಯಕ, ಶ್ರೀನಿವಾಸ, ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನರಾಜ್ ಸಿಂಗ್, ಜಿಲ್ಲಾ ಪಂಚಾಯತ್‌ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್, ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ ಇದ್ದರು.

ಮೈಕ್ರೋ ನ್ಯೂಸ್

## ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ**

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರಡ್ಡಿ ಅವರು ಜ.26 ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಬಸವರಾಜ ರಾಯರಡ್ಡಿ ಅವರು ಅಂದು ಬೆಳಿಗ್ಗೆ 09 ಗಂಟೆಗೆ ಯಲಬುರ್ಗಾ ನಗರದ ಕ್ರೀಡಾಂಗಣದಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12ಗಂಟೆಗೆ ಯಲಬುರ್ಗಾದಿಂದ ನಿರ್ಗಮಿಸಿ, 12.30ಕ್ಕೆ ಕೊಪ್ಪಳ-ಗವಿಸಿದ್ದೇಶ್ವರ ಮಠಕ್ಕೆ ಭೇಟಿ ನೀಡುವರು. 2.15ಕ್ಕೆ ಕೊಪ್ಪಳದಿಂದ ನಿರ್ಗಮಿಸಿ, 3ಗಂಟೆಗೆ ಹಿರೇವಡ್ರಕಲ್ಲ ಗ್ರಾಮದಲ್ಲಿ ಮಂಜೂರಾಗಿರುವ ಸರಕಾರಿ ಪ್ರೌಢ ಶಾಲೆಯ ಕಟ್ಟಡಕ್ಕೆ ಜಮೀನು ಪರಿವೀಕ್ಷಣೆ ಹಾಗೂ ಭೂಮಿ ಖರೀದಿಯ ಸಭೆಯಲ್ಲಿ ಭಾಗವಹಿಸುವರು. 4ಗಂಟೆಗೆ ಗಾಣದಾಳ ಗ್ರಾಮದಲ್ಲಿ ಮಂಜೂರಾಗಿರುವ ಸರಕಾರಿ ಬಸ್ ನಿಲ್ದಾಣದ ಕಟ್ಟಡಕ್ಕೆ ಜಮೀನು ಪರಿವೀಕ್ಷಣೆ ಹಾಗೂ ಭೂಮಿ ಖರೀದಿಯ ಸಭೆಯಲ್ಲಿ ಪಾಲ್ಗೊಳ್ಳುವರು. ಸಂಜೆ 5ಕ್ಕೆ ಚಿಕ್ಕಮನ್ನಾಪೂರ ಗ್ರಾಮದಲ್ಲಿ ಮಂಜೂರಾಗಿರುವ ಸರಕಾರಿ ಪ್ರೌಢ ಶಾಲೆಯ ಕಟ್ಟಡಕ್ಕೆ ಜಮೀನು ಪರಿವೀಕ್ಷಣೆ ಹಾಗೂ ಭೂಮಿ ಖರೀದಿಯ ಸಭೆಯಲ್ಲಿ ಭಾಗವಹಿಸುವರು. 6ಗಂಟೆಗೆಗುನ್ನಾಳಗ್ರಾಮದಲ್ಲಿಮಂಜೂರಾಗಿರುವ ಸರಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡಕ್ಕೆ ಜಮೀನು ಪರಿವೀಕ್ಷಣೆ ಹಾಗೂ ಭೂಮಿ ಖರೀದಿಯ ಸಭೆಯಲ್ಲಿ ಭಾಗವಹಿಸಿ, ಅಲ್ಲಿಂದ ಬೆಂಗಳೂರು ಕಡೆಗೆ ಪ್ರಯಾಣ ಬೆಳಸುವರು ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೋಲಿಯೋ ಲಸಿಕೆಯಿಂದ ಯಾವುದೇ ಮಗು ಹೊರಗುಳಿಯದಿರಲಿ: ನಲಿನ್ ಅತುಲ್

**ಹಂಪಿ ಟೈಮ್ಸ್ ಕೊಪ್ಪಳ**

ಪೋಲಿಯೋ ರಾಷ್ಟ್ರೀಯ ರೋಗನಿರೋಧಕ ದಿನದ ಅಂಗವಾಗಿ ಮಾರ್ಚ್ 3ರಂದು ನಡೆಯುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ಯಾವುದೇ ಅರ್ಹ ಮಗು ಪೋಲಿಯೋ ಲಸಿಕೆಯಿಂದ ಹೊರಗುಳಿಯದಂತೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜನವರಿ 24ರಂದು ಹಮ್ಮಿಕೊಂಡಿದ್ದ ಪೋಲಿಯೋ ಲಸಿಕಾ ಕಾರ್ಯಕ್ರಮ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ನಮ್ಮ ದೇಶದಲ್ಲಿ 2011ರ ನಂತರ ಪೋಲಿಯೋ ಪ್ರಕರಣಗಳು ಕಂಡುಬಂದಿಲ್ಲವಾದರೂ, ನಾವು ಮೈಮರೆಯುವಂತಿಲ್ಲ. ಪೋಲಿಯೋಗೆ ಕಾರಣವಾಗುವ ವೈರಸ್‌ಗಳು ನೆರೆಯ ಪಾಕಿಸ್ತಾನ, ಅಫಘಾನಿಸ್ತಾನ ದೇಶದಿಂದ ವಾತಾವರಣದಲ್ಲಿ ಸೇರಿಕೊಂಡು, ದೇಶದೊಳಗೆ ಬರುವ ಸಾಧ್ಯತೆಗಳಿರುತ್ತವೆ ಎಂಬುದಾಗಿ ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಜಗತ್ತಿನಿಂದಲೇ ಈ ಪೋಲಿಯೋ ವೈರಸ್ ನಿರ್ಮೂಲನೆಯಾಗುವವರೆಗೂ ಪಲ್ಸ್ ಪೋಲಿಯೋ ಲಸಿಕೆಯನ್ನು ತಪ್ಪದೆ ಮಕ್ಕಳಿಗೆ ಹಾಕಿಸುವುದು ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಲಸಿಕಾ ದಿನ ಎಲ್ಲಾ ಅಂಗನವಾಡಿ ಕೇಂದ್ರವನ್ನು ತೆರೆದಿಟ್ಟು ಮಕ್ಕಳಿಗೆ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳಬೇಕು. ತಾಯಂದಿರ ಸಭೆ, ಬಾಲ ವಿಕಾಸ ಸಮಿತಿ ಸಭೆಗಳಲ್ಲಿ ಲಸಿಕಾ ದಿನಾಂಕದ ಕುರಿತು, ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಮಹತ್ವದ ಬಗ್ಗೆ ತಿಳಿಸಬೇಕು. ಲಸಿಕಾ ಕಾರ್ಯಕ್ರಮದಲ್ಲಿ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಚಾರಕರು, ಸ್ತ್ರೀ ಶಕ್ತಿ ಗುಂಪುಗಳ ಸದಸ್ಯರು, ಇಲಾಖೆಯ ಅಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಬೇಕು.

ಅನಾಥಾಶ್ರಮಗಳಲ್ಲಿ ಇರುವ ಎಲ್ಲಾ ಮಕ್ಕಳಿಗೂ ಕೂಡ ಲಸಿಕೆ ಹಾಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಈ ಲಸಿಕಾ ಕಾರ್ಯಕ್ರಮಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ, ಕಾರ್ಮಿಕ ಇಲಾಖೆ, ಸಾರಿಗೆ, ವೈದ್ಯಕೀಯ ಶಿಕ್ಷಣ, ಸೇರಿದಂತೆ ಇತರ ಇಲಾಖೆಗಳು ಅಗತ್ಯ ಸಹಕಾರ ನೀಡಿ, ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಪಂಚಾತ್ ಸಿಇಒ ರಾಹುಲ್ ರತ್ನಂ ಪಾಂಡೆಯ, ಡಿಎಚ್ಒ ಡಾ ಟಿ.ಲಿಂಗರಾಜು, ವಿವಿಧ ಇಲಾಖಾಧಿಕಾರಿಗಳು ಇದ್ದರು.

# ಗಿಣಿಪಾಠ ಒಪ್ಪಿಸಿದ ಅಧಿಕಾರಿಗಳು

**ತ್ರೈಮಾಸಿಕ ಕೆಡಿಪಿ ಸಭೆ | 3 ಗಂಟೆಯಲ್ಲೆ 46 ಇಲಾಖೆಗಳ ಪ್ರಗತಿ ಪರಿಶೀಲನೆ! | ಜನಪ್ರತಿನಿಧಿಗಳ ಕಡೆಗಣಿಸಿದ ಅಧಿಕಾರಿಗಳಿಗೆ ತರಾಟೆ**

**ಸಿಎಂ ನೇತೃತ್ವದಲ್ಲೆ ಮುಂದಿನ ಕೆಡಿಪಿ ಸಭೆ ಸಚಿವ ಜಮೀರ್ ಖಾನ್ ಸೂಚನೆ | ಸ್ಲಂಗಳ ಅಭಿವೃದ್ಧಿ, ನೀರು, ಮೇವು ಒದಗಿಸಲು ಆದ್ಯತೆ**

**ಹಂಪಿ ಟೈಮ್ಸ್ ಹೊಸಪೇಟೆ**



ವಿಜಯನಗರ ಜಿಲ್ಲೆಯಲ್ಲಿ ತಾಂತ್ರಿಕ ಕಾರಣಗಳಿಂದಾಗಿ 26 ಸಾವಿರ ಗೃಹಲಕ್ಷ್ಮೀಯರಿಗೆ ಇನ್ನೂ ಎರಡು ಸಾವಿರ ಹಾಕಿಲ್ಲ. ಪಶುಪಾಲನ ಮತ್ತು ಪಶುಸಂಗೋಪನಾ ಇಲಾಖೆಯಲ್ಲಿ ಮೂಕಪ್ರಾಣಿಗಳ ರೋಧನ ಕೇಳೋರಿಲ್ಲ ಎಂದ ಶಾಸಕರಿಗೆ ಸಿಬ್ಬಂದಿಗಳ ಕೊರತೆ ಎಂದು ಅಧಿಕಾರಿಗಳು, ಹಡಗಲಿಯಲ್ಲಿ ಮೀನುಗಾರಿಕೆ ಕಚೇರಿ ಇದ್ದೂ ಇಲ್ಲದಂತಿವೆ ಬಾಗಿಲೂ ಸಹ ತೆರೆಯುತ್ತಿಲ್ಲ ಇನ್ನೂ ಮೀನುಗಾರರಿಗೆ ಮಾಹಿತಿ ಹೇಗೆ ಕೊಡುತ್ತೀರಿ ಎಂದು ಶಾಸಕಿ ಎಂ.ಪಿ.ಲತಾ ಕೇಳಿದರೆ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇವೆ ಎಂದ ಅಧಿಕಾರಿ. ಎಲ್ಲಾ ಶಾಲೆಗಳಲ್ಲಿ ಶೌಚಾಲಯ, ನೀರಿನ ವ್ಯವಸ್ಥೆ ಇದೇಯೇ ಎಂಬ ಜನಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಲು ತತ್ತರಿಸಿದ ಡಿಡಿಪಿಐ. ಅಲ್ಪಸಂಖ್ಯಾತರ ಇಲಾಖೆಯಡಿ ಬರುವ ವಸತಿಯುತ ಶಾಲೆಗಳಲ್ಲಿ ಸೌಲಭ್ಯಗಳ ಕೊರತೆ. ಬಿಪಿಎಲ್ ಅಕ್ಕಿ ಪಡೆದು ಮಾರುತ್ತಿದ್ದಾರಂತೆ ಎಂಬ ಸಚಿವರ ಪ್ರಶ್ನೆಗೆ, ನಡೆಯುತ್ತಿದೆ ಆದರೆ ಹಾಗೆ ಅಲ್ಲ ಬೇರೆಯವರಿಗೆ ಮಾರುತ್ತಾರೆ, ತರಹೇವಾರಿ ಪಡಿತರ ವಿತರಿಸುತ್ತಿರುವುದರಿಂದ ಇತ್ತೀಚೆಗೆ ಕಡಿಮೆಯಾಗಿದೆ ಎಂದು ಜನಪ್ರತಿನಿಧಿಗಳಿಗೆ ಅಧಿಕಾರಿಗಳು ಗಿಣಿಪಾಠ ಹೇಳಿದರು.

ಆಯಾ ಇಲಾಖೆಯ ಅಧಿಕಾರಿಗಳು ಮುತುವರ್ಜಿ ವಹಿಸಿ ಕೆಲಸ ಮಾಡಬೇಕು. ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂ ಹಾಲನಲ್ಲಿ ಗುರುವಾರ ನಡೆದ ಜಿಲ್ಲಾಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಯೋಜನೆಗಳ ಅನುಷ್ಠಾನಕ್ಕೆ ಯಾವುದೇ ರೀತಿಯ ಹಣಕಾಸಿನ ಕೊರತೆಯಿಲ್ಲ. ನಿಗದಿಪಡಿಸಿದ ಗುರಿಯನುಸಾರ ಅನುದಾನ ಸದ್ಬಳಕೆಯಾಗಬೇಕು. ಕುಡಿಯುವ ನೀರು ಪೂರೈಕೆ, ರಸ್ತೆ ಸುಧಾರಣೆ, ಶೌಚಾಲಯಗಳ ನಿರ್ಮಾಣ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸುವ ಕಾರ್ಯಾನುಷ್ಠಾನಕ್ಕೆ ಅಧಿಕಾರಿಗಳು ಮೊದಲಾದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ಸಚಿವರು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿನ 110 ಸ್ಲಮ್‌ಗಳಲ್ಲಿ ಬದಲಾವಣೆ ಕಾಣಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಿಯಾಶೀಲರಾಗಿ ಆಯಾ ತಾಲೂಕುಗಳಲ್ಲಿ ಸಂಚರಿಸಿ ಆಯಾ ತಾಲೂಕಿನ ಶಾಸಕರೊಂದಿಗೆ ಚರ್ಚಿಸಿ, ಆಯಾ ಕಡೆಗಳಲ್ಲಿನ ಸ್ಲಮ್‌ಗಳಲ್ಲಿ ಮನೆಗಳ ಬೇಡಿಕೆ, ನೀರಿನ ಬೇಡಿಕೆ ಸೇರಿದಂತೆ ಅಗತ್ಯ ಬೇಡಿಕೆಗಳ ಬಗ್ಗೆ ಕ್ರಿಯಾಯೋಜನೆ ಸಿದ್ದಪಡಿಸಿ 15 ದಿನಗಳೊಳಗಡೆ ನೀಡುವಂತೆ ಸಚಿವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಾಜ್ಯದಲ್ಲಿ ಅಂದಾಜು 4600 ಸ್ಲಮ್‌ಗಳಿದ್ದು, ಈ ಹಿಂದೆ ಕಡಿಮೆ ಅನುದಾನ ನಿಗದಿಪಡಿಸುತ್ತಿದ್ದರು. ಬಡವರ ಬಗ್ಗೆ ತಾವು ವಿಶೇಷ ಕಾಳಜಿ ಹೊಂದಿದ್ದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ 500 ಕೋಟಿ ನಿಗದಿಪಡಿಸಿದ್ದಾಗಿ ತಿಳಿಸಿದರು. ಅರ್ಹರಿಗೆ ಈ ಬಾರಿ 36,000 ಮನೆಗಳು ನೀಡುತ್ತಿದ್ದೇವೆ. ಈ ಪೈಕಿ ವಿಜಯನಗರ ಜಿಲ್ಲೆಯಲ್ಲಿ 1160 ಫಲಾನುಭವಿಗಳಿಗೆ ವಸತಿ ಸೌಕರ್ಯ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಶೌಚಾಲಯ ಕಟ್ಟುತ್ತೇವೆ. ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎಂದು ಅಧಿಕಾರಿಗಳು ಸಭೆಯಲ್ಲಿ ವರದಿ ಕೊಡುತ್ತ ಹೋಗುವುದು ಸರಿಯಲ್ಲ ಎಂದು ಸಂಸದರಾದ ವೈ ದೇವೇಂದ್ರಪ್ಪ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ನೀಡಿದ ನಿರ್ದೇಶನದಂತೆ ಪ್ರತಿಯೊಂದು ಶಾಲೆಯಲ್ಲಿ ಶೌಚಾಲಯಗಳ ನಿರ್ಮಾಣಕ್ಕೆ ಒತ್ತು ಕೊಡಲು ಕ್ರಮ ವಹಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು.

ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ನೇಮಿರಾಜ ನಾಯಕ ಅವರು ಮಾತನಾಡಿ, ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವಾಗ ಫ್ಯಾಕ್ಟರಿಗಳಿಗೆ ನೀರು ಹರಿಸುವ ಬಗ್ಗೆ ಪರಿಶೀಲಿಸಬೇಕು ಎಂದು ಸಲಹೆ ಮಾಡಿದರು. ಹೊರಗುತ್ತಿಗೆ ಆಧಾರದ ಮೇಲೆ ಪಶು ವೈದ್ಯಾಧಿಕಾರಿಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಬೇಕು. ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಹಲವಾರು ಬಾರಿ ತಿಳಿಸಿದ್ದರು ಸಹ ಆ ಕಾರ್ಯವಾಗುತ್ತಿಲ್ಲ. ಈ ಬಗ್ಗೆ ಜಿಲ್ಲೆಯ ಎಲ್ಲಾ ತಾಪಂ ಕಾರ್ಯನಿರ್ವಹಣಾಧಿಕಾರಿಗಳು ಗಮನ ಹರಿಸಬೇಕು ಎಂದರು ಸಲಹೆ ಮಾಡಿದರು.

ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆ ನಿಷ್ಕ್ರಿಯವಾಗಿದೆ ಎಂದು ಶಾಸಕರಾದ ಎಂ.ಪಿ.ಲತಾ ಅವರು ಅಸಮಾಧಾನ ವ್ಯಕ್ತಪಡಿಸಿದರು. ನಮ್ಮ ಕ್ಷೇತ್ರದಲ್ಲಿ ಕಂದುರೋಗ ಮತ್ತು ಕಾಲುಬಾಯಿ ಲಸಿಕೆಗೆ ಸಮರ್ಪಕ ವ್ಯವಸ್ಥೆ ಮಾಡಬೇಕು. ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನಿಗದಿಪಡಿಸಿ ಪಶು ಚಿಕಿತ್ಸಾಲಯಗಳ ನಿರ್ಮಾನಕ್ಕೆ ಒತ್ತು ಕೊಡಬೇಕು. ನಮ್ಮ ಕ್ಷೇತ್ರದಲ್ಲಿ ತೋಟಗಾರಿಕಾ ಬೆಳೆಗಾರರ ಸಂಖ್ಯೆಗನುಸಾರ ತೋಟಗಾರಿಕಾ ಬೆಳೆಗಳಿಗೆ ಪ್ರೋತ್ಸಾಹ ಧನ ನೀಡಿ ರೈತರಿಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎನ್.ಟಿ.ಶ್ರೀನಿವಾಸ ಅವರು ಮಾತನಾಡಿ, ಸಂತೆಗಳಲ್ಲಿ ದನಗಳ ಮಾರಾಟ ಹೆಚ್ಚುತ್ತಿದೆ. ಜಾನುವಾರು ಪಾಲನೆ ಜನರಿಗೆ ಹೊರೆಯಾಗಿ ಪರಿಣಮಿಸುತ್ತಿದೆ. ಹೀಗಾಗಿ ಮೇವು ಬ್ಯಾಂಕ್ ಸ್ಥಾಪನೆಗೆ ಹೆಚ್ಚಿನ ಒತ್ತು ಕೊಡಬೇಕು ಎಂದು ಸಲಹೆ ಮಾಡಿದರು. ಕ್ಷೇತ್ರದಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆ ಸಮಸ್ಯೆಯನ್ನು ಬಗೆಹರಿಸಬೇಕು ಎಂದರು. ಬಳ್ಳಾರಿ ಜಾಲಿಯು ಎಲ್ಲೆಂದರಲ್ಲಿ ಬೆಳೆದು ಅಲ್ಲಲ್ಲಿ ಗಲೀಜು ಉಂಟಾಗಿ ಸೊಳ್ಳೆಗಳ ಉತ್ಪತ್ತಿ ಹೆಚ್ಚುತ್ತಿತ್ತು. ಇದನ್ನು ಸರಿಪಡಿಸುವ ಕಾರ್ಯಕ್ಕೆ ಕ್ಷೇತ್ರಕ್ಕೆ ಅನುದಾನ ಬಿಡುಗಡೆಯಾಗಿ ಟೆಂಡರ್ ಪ್ರಕ್ರಿಯೆ ನಡೆದಿದ್ದು ಕ್ಷೇತ್ರದ ಪರವಾಗಿ ಸಚಿವರಿಗೆ ಅಭಿನಂದನೆ ತಿಳಿಸುವೆ ಎಂದರು.

ಸಭೆಯಲ್ಲಿ ಶಾಸಕರಾದ ಹೆಚ್.ಆರ್.ಗವಿಯಪ್ಪ, ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನರಾಜ್ ಸಿಂಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಅರ್ಷಲನ್,ಅಪರಜಿಲ್ಲಾಧಿಕಾರಿಗಳಾದ ಅನುರಾಧ ಜಿ, ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ ಇದ್ದರು.

# ವಿದ್ಯಾವಂತರಿಂದ ಮತದಾನ ಕುಸಿತ

**ಸಿವಿಲ್ ನ್ಯಾಯಾಧೀಶ ಯೋಗೇಶ್.ಜೆ ಅಭಿಮತ | ಮತದಾನವೇ ಪ್ರಜಾಪ್ರಭುತ್ವಕ್ಕೆ ಬಲ**




**ಹಂಪಿ ಟೈಮ್ಸ್ ಕೂಡ್ಲಿಗಿ**

ರಾಷ್ಟ್ರೀಯ ಮತದಾರರ ದಿನ ಆಚರಣೆಗೆ ಮೂಲ ಉದ್ದೇಶ ಹೊಸ ಮತದಾರರನ್ನು ಸೆಳೆಯುವುದು, ಉತ್ತೇಜಿಸುವುದು ಹಾಗೂ ಮತದಾರರ ಸಂಖ್ಯೆಯನ್ನು ಹೆಚ್ಚಳ ಮಾಡುವ ನಿಟ್ಟಿನಲ್ಲಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ ಎಂದು ಸಿವಿಲ್ ನ್ಯಾಯಾಧೀಶ ಯೋಗೇಶ್.ಜೆ ತಿಳಿಸಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕು ವಕೀಲರ ಸಂಘ, ತಾಲೂಕು ಆಡಳಿತ ಹಾಗೂ ಶ್ರೀಮತಿ ಅಂಗಡಿ ವೀರಮ್ಮ, ತಿರುಕಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಮತದಾರ ದಿನ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ಮತದಾನದ ಬಗ್ಗೆ ಮತದಾರರಲ್ಲಿ ಜಾಗೃತಿ ಮೂಡಿಸುವುದು ಮತ್ತು ಚುನಾವಣೆ ಪ್ರಕ್ರಿಯೆಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಈ ದಿನ ಹೊಸ ಮತದಾರರಿಗೆ ಹೊಸ ಮತದಾರರ ಗುರುತಿನ ಚೀಟಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶಗಳಿಂತ ನಗರ ಪ್ರದೇಶಗಳಲ್ಲಿ ಕಡಿಮೆ ಪ್ರಮಾಣದ ಮತದಾನವಾಗುತ್ತಿದೆ. ವಿದ್ಯಾವಂತರು ಹೆಚ್ಚಿರುವ ನಗರ ಪ್ರದೇಶದಲ್ಲಿ ಮತದಾನ ಆಗುತ್ತಿಲ್ಲ. ಮತದಾನ ಜವಾಬ್ದಾರಿಯ ಅರಿವಿದ್ದೂ ದೂರ ಉಳಿಯುವ ವಿದ್ಯಾವಂತರಿಗೆ ಹಾಗೂ ಅರಿವಿಲ್ಲದೆ ದೂರ ಉಳಿಯುವ ಅವಿದ್ಯಾವಂತರಿಗೆ ಮತದಾನದ ಬಗ್ಗೆ ಅರಿವು ಮೂಡಿಸುವುದು ಈ ದಿನದ ಉದ್ದೇಶ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಪ್ರತಿ ಪ್ರಜೆಯು ಕಡ್ಡಾಯವಾಗಿ ಮತದಾನ ಮಾಡಿ ಸಂವಿಧಾನದ ಆಶಯವನ್ನು ಗೌರವಿಸಬೇಕು ಎಂದು ಪ್ರತಿಜ್ಞಾ ವಿಧಿ ಭೋದಿಸಿದರು. ನಂತರ ವಿಧ್ಯಾರ್ಥಿಗಳು ಮತದಾನದ ಜಾಗೃತಿ ಕುರಿತು ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಸಂಚರಿಸಿ ಮತದಾನದ ಮಹತ್ವವನ್ನು ಘೋಷಣೆಗಳ ಮೂಲಕ ಜಾಗೃತಿ ಮೂಡಿಸಿದರು. ಸಹಾಯಕ ಸರ್ಕಾರಿ ಅಭಿಯೋಜಕಿ ವೈ.ಶಿಲ್ಪ, ತಾಪಂ ಇಒ ವೈ. ರವಿಕುಮಾರ್, ತಹಸೀಲ್ದಾರ್ ಎಂ. ರೇಣುಕಾ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಬಿಇಒ ಪದ್ಮನಾಭ ಕರಣಂ, ಪ್ರಭಾರ ಸಿಡಿಪಿಒ ಮಾಲುಂಭಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸುನೀಲ್ ಕುಮಾರ್, ವಕೀಲ ಸಿ.ವಿರೂಪಾಕ್ಷಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು, ಚುನಾವಣಾ ಸಿಬ್ಬಂದಿಗಳು ಇದ್ದರು.

## ಸಚಿವ ಬಿ.ನಾಗೇಂದ್ರ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕ್ರೀಡಾ ಸಚಿವ ಬಿ.ನಾಗೇಂದ್ರ ಜ.26 ರಂದು ಬೆಳಿಗ್ಗೆ 07.15 ಕ್ಕೆ 75ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಕಂಟೋನ್ ಮೆಂಟ್ ನ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಡಾ.ರಾಜ್ ಕುಮಾರ್ ಉದ್ಯಾನವನದ ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರ ಪ್ರತಿಮೆಗೆ ಗೌರವ ಮಾಲಾರ್ಪಣೆ. ವಿಮ್ಸ್ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಿ, ಸಂದೇಶ. ಸಂವಿಧಾನ ಜಾಗೃತಿ ಜಾಥಾ ಸ್ತಬ್ಧಚಿತ್ರಕ್ಕೆ ಚಾಲನೆ ನೀಡುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.









# ಉತ್ತಮ ಪ್ರತಿನಿಧಿಗಳ ಆಯ್ಕೆ ನಮ್ಮ ಮುಖ್ಯ ಕರ್ತವ್ಯ

**ನಾಯ್ಯಧೀಶ ಅಬ್ದುಲ್ ರಹೀಮಾನ್ ಎ ನಂದಗಡಿ ಹೇಳಿಕೆ | ಜಿಲ್ಲಾಡಳಿತದಿಂದ ರಾಷ್ಟೀಯ ಮತದಾರ ದಿನಾಚರಣೆ**



**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತದಿಂದ ರಾಷ್ಟ್ರೀಯ ಮತದಾರರ ದಿನಾಚರಣೆಯ ಕಾರ್ಯಕ್ರಮ ಜನವರಿ 25ರಂದು ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಯುವ ಮತದಾರರಿಗೆ ಮತದಾನದ ಗುರುತಿನಿ ಚೀಟಿ ವಿತರಿಸಿ ಯುವ ಮತದಾರರಿಗೆ ಮತದಾನದ ಬಗ್ಗೆ ಅರಿವು ಮೂಡಿಸಲಾಯಿತು. ಜಿಲ್ಲಾ ಮಟ್ಟದಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನಡೆಸಿದ ಪ್ರಬಂಧ ಹಾಗೂ ಬಿತ್ತಿಚಿತ್ರ ರಚನೆ, ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗೌರವಾನ್ವಿತ ಜಿಲ್ಲಾ ಪ್ರಧಾನ ಹಾಗೂ ಸತ್ರ ನಾಯ್ಯಧೀಶರಾದ ಅಬ್ದುಲ್ ರಹೀಮಾನ್ ಎ ನಂದಗಡಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭಾರತವು ಪ್ರಪಂಚದ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಉತ್ತಮ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾದದ್ದು ನಮ್ಮ ಮುಖ್ಯ ಕರ್ತವ್ಯವಾಗಿದೆ. ನಾವು ನಮ್ಮ ಕರ್ತವ್ಯ, ಜವಾಬ್ದಾರಿಯನ್ನು ಸರಿಯಾಗಿ ನಿಬಾಯಿಸಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಗೌರವಾನ್ವಿತ ನ್ಯಾಯಾಧೀಶರಾದ ಹೇಮಲತಾ ಬಿ ಹುಲ್ಲೂರ, ರಮೇಶಬಾಬು ಬಿ.ಎನ್., ಕಿಶನ್ ಬಿ ಮಾಡಲಗಿ, ತೃಪ್ತಿ ಧರಣಿ, ಕುಮಾರಿ ಚೈತ್ರಾ ಜೆ., ಮತದಾರ ಪಟ್ಟಿ ವೀಕ್ಷಕರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್‌ರಾಜ್ ಸಿಂಗ್, ಜಿಪಂ ಸಿಇಒ ಸದಾಶಿವ ಪ್ರಭು ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಸೇರಿದಂತೆ ಇತರರು ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA